ಹೊರನಾಡ ಚಿಲುಮೆ

ಕಾಂಗರುನಾಡಿನ ಕನ್ನಡಿಗರಿಂದ ವಿಶ್ವ ಕನ್ನಡಿಗರ ಹೃದಯಕ್ಕೆ

ಆಸ್ಟ್ರೇಲಿಯಾದ ಮೊಟ್ಟಮೊದಲ ಕನ್ನಡ ಇ-ಮಾಸಪತ್ರಿಕೆ

Chilume Circulated in and around 10 countries

ಸಂಪುಟ ೨, ಸಂಚಿಕೆ ೪, ಸೆಪ್ಟೆಂಬರ್ ೨೦೧೪

ಚಿಲುಮೆಯಲ್ಲಿ ಸಾಹಿತ್ಯದ ಜಂಬೂ ಸವಾರಿ

ಶಿಕ್ಷಣ ಕ್ಷೇತ್ರಕ್ಕೆ ಅಪೂರ್ವ ಸೇವೆ ಸಲ್ಲಿಸಿದ "ಶ್ರೀ ಎಂ ಆರ್ ಶ್ರೀ" ಅವರ ಬಗ್ಗೆ ಲೇಖನ

ಡಾ॥ ಸಿ. ವಿ. ಮಧುಸೂದನ - ಪುಟ ೩

ದೈನಂದಿನ ಆಗುಹೋಗುಗಳನ್ನು ಹಾಸ್ಯಧಾಟಿಯಲ್ಲಿ ಹೇಳುವ "ಸ್ಮಿತಾ ಮೇಲ್ಕೋಟೆ" ಅವರ ಬರಹ

ತಿಪ್ಪೆಯ ತಪಸ್ಸು - ಪುಟ ೧೪

ನವರಾತ್ರಿಯ ಶುಭಾಶಯಗಳು

Find us on: facebook

ಹೊರನಾಡ ಚಿಲುಮೆ ಇ-ಮಾಸ ಪತ್ರಿಕೆಯ ಓದುಗರಿಗೆಂದು ತೆರೆಯಲಾಗಿರುವ ಫೇಸ್ಬುಕ್ ಗುಂಪು ಸೇರಿಕೊಳ್ಳಲು ಕೆಳಗಿನ ಲಿಂಕ್ ಕ್ಲಿಕ್ ಮಾಡಿ

JOIN CHILUME FACEBOOK GROUP (You have to be logged in to facebook to join)

ಚಿಲುಮೆಯ ಒಳಗೆ

ಈಗಿನ ಸುದ್ದಿ ... ಪು. ೧

ಸಂಪಾದಕೀಯ ... ಪು. ೨

ಎಂ ಆರ್ ಶ್ರೀ - ಲೇಖನ ... ಪು. ೩

ಚಿಲುಮೆಯ ಒಳಗೆ

ಆರೋಗ್ಯ ... ಪು. ೬

ವಿಚಾರ-ವಿಹಾರ ... ಪು. ೭

ರಾಂ ರಾಮ! ಹಾಸ್ಯ ... ಪು. ೮

ಚಿಲುಮೆಯ ಒಳಗೆ

ಕಥಾಚಿಲುಮೆ ... ಪು. ೧೧

ರೆಸಿಪಿ ಕೊಡ್ತೀರಾ! ... ಪು. ೧೧

ಕಾವ್ಯ ಚಿಲುಮೆ, ಹಾಸ್ಯ ಚಿಲುಮೆ ... ಪು. ೧೨

ಚಿಲುಮೆಯ ಒಳಗೆ

ಪದ ಪುಂಜ ... ಪು. ೧೩

ರಂಗೋಲಿ ... ಪು. ೧೩

ತಿಪ್ಪೆಯ ತಪಸ್ಸು(ಹಾಸ್ಯ) ... ಪು. ೧೪

ಚಿಲುಮೆಯ ಒಳಗೆ

ಹುಬ್ಬಳ್ಳಿ ಜಂಕ್ಷನ್! ... ಪು. ೧೦

ವಿಜ್ಞಾನ ... ಪು. ೧೬

ಅಲ್ಲಲ್ಲಿ ಏನೇನು ... ಪು. ೧೬

ಚಿಲುಮೆಯ ಒಳಗೆ

ಕರ್ನಾಟಕ ಚಲನಚಿತ್ರ ಪ್ರಶಸ್ತಿ ಪುರುಸ್ಕೃತರಾದ ಸಿಡ್ನಿವಾಸಿ ಸುದರ್ಶನ್ ಅವರ ಪರಿಚಯ - ಪುಟ ೫

ಈಗಿನ ಸುದ್ದಿ

ಸಿಡ್ನಿಯಲ್ಲಿ ಸಿನಿಮ ರಸಿಕರಿಗೆ ಹಬ್ಬದೂಟ! – ವರದಿ

ಒಂದು ಸಮಯಕ್ಕೆ ಕೇವಲ ಸಿ.ಡಿ ಅಥವಾ ಇಂಟರ್ನೆಟ್ ನಲ್ಲಿ ಮಾತ್ರ ನೋಡಬಹುದಾಗಿದ್ದ ಕನ್ನಡ ಚಿತ್ರಗಳು, ಈ ನಡುವೆ ಸಿಡ್ನಿಯ ಮತ್ತು ಆಸ್ಟ್ರೇಲಿಯಾದ ಇತರ ನಗರಗಳ ಚಿತ್ರಮಂದಿರಗಳಲ್ಲಿ ತೆರೆಕಾಣುತ್ತಿರುವುದು ಕನ್ನಡಿಗರಿಗೆ ಸಂತಸದ ವಿಷಯ. ಆಗಸ್ಟಿನಲ್ಲಿ ಸಿಡ್ನಿಯಲ್ಲಿ ತೆರೆಕಂಡ "ಒಗ್ಗರಣೆ" ಮತ್ತು "ಮಾಣಿಕ್ಯ" ಚಿತ್ರದ ಒಂದು ಪುಟ್ಟ ವರದಿ ಇಲ್ಲಿದೆ.

ಆಗಸ್ಟ್ ೯ ಮತ್ತು ೧೦, ಸಿಡ್ನಿಯ ಲಿವರ್ಪೂಲಿನ ಇವೆಂಟ್ ಸಿನಿಮಾಸ್ ಚಿತ್ರಮಂದಿರದಲ್ಲಿ ಜನರೋ ಜನರು. ಅದೂ ಕನ್ನಡಿಗರು. ಎಲ್ಲರಿಗೂ ಒಂದೇ ಕುತೂಹಲ. "ಒಗ್ಗರಣೆ" ಎಂಬ ಚಿತ್ರದ ಘಮಲು ಹೇಗಿರುತ್ತದೆ? ಹಾಡುಗಳು ಹೇಗೆ ಇತ್ಯಾದಿ. ಅಚ್ಚುಕಟ್ಟಾದ ವ್ಯವಸ್ಥೆಯಿಂದ ಜನರು ತಮ್ಮ ನಿಗದಿಪಡಿಸಿದ ಆಸನಗಳಲ್ಲಿ ಕುಳಿತು ಚಿತ್ರ ಶುರುವಾಗುವ ತವಕದಲ್ಲಿದ್ದರು. ಚಿತ್ರದ ಹೆಸರೇ ಒಗ್ಗರಣೆ. ಅದಕ್ಕೆ ತಕ್ಕ ಹಾಗೆ ತಮ್ಮ ತಮ್ಮ ನಾಲಿಗೆಯ ಚಪಲಕ್ಕೆ ಕುರುಕುಲು ಬೇಡವೇ. ಸಾಕಷ್ಟು ಜನರು ತಮ್ಮ ತಮ್ಮ ಅಭಿರುಚಿಯ ತಿಂಡಿಗಳನ್ನು ತಂದೇ ಇದ್ದರು. ಚಿತ್ರ ಶುರು ಆಗುತ್ತಿದ್ದಂತೆ "ಈ ಜನುಮವೇ ... ಅಹ ದೊರಕಿತು ರುಚಿ ಸವಿಯಲು ..." ಎಂದು ಹಾಡು ಕೇಳಿಸಿತು. ಸುತ್ತ ಮುತ್ತಲೆಲ್ಲ ತಿಂಡಿ ಪ್ಯಾಕ್ಕೆಟ್ಟಿನ ಕವರ್ ಹರಿಯುವ ಶಬ್ದ ಹಿನ್ನಲೆ ಸಂಗೀತದಂತೆ ಶುರುವಾಯಿತು.

ಒಗ್ಗರಣೆ ಚಿತ್ರದ ಇಡೀ ತಾರಾಗಣ ಪ್ರೇಕ್ಷಕರಿಗೆ ಮೆಚ್ಚುಗೆಯಾದದ್ದರಲ್ಲಿ ಸಂದೇಹವಿಲ್ಲ. ಪ್ರತಿಯೊಬ್ಬರೂ ಪಾತ್ರಕ್ಕೆ ಬೇಕಿರುವ ರಂಗನ್ನು ತುಂಬಿ ಅಭಿನಯ ನೀಡಿದ್ದಾರೆ. ಹೊಸ ಧಾಟಿಯ ಹಾಡುಗಳು ಚಿತ್ರಕ್ಕೆ ಪೂರಕವಾಗಿ ರೂಪಗೊಂಡಿದ್ದು, ಕಥಾ ಹಂದರಕ್ಕೆ ಪುಷ್ಟಿ ನೀಡಿತು. ಚಿತ್ರ ಪ್ರದರ್ಶನದ ತರುವಾಯ, ಪರಿಚಿತರ ಮಾತುಕಥೆ, ಯಾವುದೇ ಸಭೆ ಸಮಾರಂಭದ ಬೆಡಗನ್ನು ನೆನಪಿಸುವಂತಿತ್ತು. ಈ ಚಲನಚಿತ್ರಕ್ಕೆ ಲಭ್ಯವಿದ್ದ ಎಲ್ಲ ಟಿಕೆಟ್ ಖಾಲಿಯಾಗಿ ಮತ್ತೊಂದು ಪ್ರದರ್ಶನ ಕಂಡಿತು ಎನ್ನುವುದು ಚಿತ್ರದ ಹೆಮ್ಮೆಯೇ ಸರಿ. ಒಟ್ಟಿನಲ್ಲಿ, ವಾರಾಂತ್ಯದಲ್ಲಿ, ನೆಚ್ಚಿನ ಕನ್ನಡ ಚಿತ್ರವನ್ನು ನೋಡುವ ಭಾಗ್ಯವನ್ನು ಸುಗಮ ಕನ್ನಡ ಕೂಟದ ಶ್ರೀ ಕನಕಾಪುರ ನಾರಾಯಣರವರು ಸಿಡ್ನಿ ಕನ್ನಡಿಗರಿಗೆ ಒದಗಿಸಿ ಕೊಟ್ಟರು ಎನ್ನುವುದು ಸಂತಸದ ವಿಷಯ.

ಅದೇ ರೀತಿ ಬಹು ಅದ್ದೂರಿಯ "ಮಾಣಿಕ್ಯ" ಚಲನಚಿತ್ರವೂ ಆಗಸ್ಟ್ ೩೧ ರಂದು ಯಶಸ್ವಿಯಾಗಿ ಪ್ರದರ್ಶನಗೊಂಡು ಜನರನ್ನು ಮನರಂಜಿಸಿತು. ಸಿಡ್ನಿ ನಗರದ ಕನ್ನಡಿಗರು, ಚಲನಚಿತ್ರ ಪ್ರದರ್ಶನಕ್ಕೆ ಕೊಟ್ಟ ಪ್ರೋತ್ಸಾಹಕ್ಕೆ ವ್ಯವಸ್ಥಾಪಕರು ತಮ್ಮ ಧನ್ಯವಾದಗಳನ್ನು ತಿಳಿಸಿದ್ದಾರೆ.

ಈ ಎರಡು ಚಲನಚಿತ್ರದಿಂದ ಬಂದ ಲಾಭಾಂಶವನ್ನು ಮಣಿಪಾಲದಲ್ಲಿರುವ "ಆಸರೆ ಫೌಂಡೇಶನ್" ಗೆ ವ್ಯವಸ್ಥಾಪಕರು ಕೊಟ್ಟಿರುವುದು "ಕೆರೆಯ ನೀರನು ಕೆರೆಗೆ ಚೆಲ್ಲು ..." ಎನ್ನುವುದಕ್ಕೆ ಪೂರಕವಾಗಿದೆ.

ಹೆಚ್ಚು ಹೆಚ್ಚು ಜನರು ಇದೇ ರೀತಿ ಪ್ರೋತ್ಸಾಹ ಕೊಟ್ಟರೆ, ಬರುವ ದಿನಗಳಲ್ಲಿ ಇನ್ನೂ ಹೆಚ್ಚು ಕನ್ನಡ ಚಲನಚಿತ್ರಗಳನ್ನು ತರಿಸಿ, ನಮ್ಮ ಕನ್ನಡಿಗರಿಗೆ ತೋರಿಸುವುದು ಕಷ್ಟದ ಕೆಲಸವಲ್ಲ ಎನ್ನುವ ಉತ್ಸಾಹ ವ್ಯವಸ್ತಾಪಕರದ್ದು. ದೃಶ್ಯಮಾಧ್ಯಮದ ಒಂದು ವೈವಿಧ್ಯಮಯ ರೂಪವಾದ ಚಲನಚಿತ್ರರಂಗವು, ಆಸ್ಟ್ರೇಲಿಯಾದಲ್ಲೂ ಚೆನ್ನಾಗಿ ಬೆಳೆದು ಕನ್ನಡಿಗರಿಗೆ ಒಳ್ಳೊಳ್ಳೆಯ ಚಿತ್ರಗಳ ಪ್ರದರ್ಶನವನ್ನು ಮಾಡಿ ಕೊಡಲಿ ಎಂಬುದೇ ಬೆಲುಮೆಯ ಹಾರೈಕೆ ▪

ಕೇಳೋಣ

ಹಳೇ ಮೈಸೂರು ಸಂಸ್ಥಾನದ ರಾಷ್ಟ್ರಗೀತೆ ಕೇಳಲು ಮೇಲಿನ ಚಿತ್ರವನ್ನು ಕ್ಲಿಕ್ ಮಾಡಿ

(Click picture to view)

ಮುಂದೆರಡು ತಿಂಗಳ ಪ್ರಮುಖ ದಿನಗಳು ಪುಟ ೨ ರಲ್ಲಿ ...

ಮೈಸೂರು ದಸರಾ ಬಗ್ಗೆ ಸಾಕ್ಷ್ಯ ಚಿತ್ರ ನೋಡಲು ಚಿತ್ರ ಕ್ಲಿಕ್ ಮಾಡಿ

(Click picture to view)

ನೋಡೋಣ



ನಾಗಲೋಟದಲ್ಲಿ ಓಡುತ್ತಿವೆ ಎಂದೆನಿಸುವ ಈ ದಿನಗಳಲ್ಲಿ ನಮಗಾಗಿ ಒಂದಿಷ್ಟು ಸಮಯ ಮಾಡಿಕೊಳ್ಳುವುದೇ ದುಸ್ತರವೆನಿಸುತ್ತಿದೆ. ಈ ಅಭಿಪ್ರಾಯವನ್ನು ನಾವುಗಳೆಲ್ಲ ನಮ್ಮ ನಮ್ಮ ಸ್ನೇಹಿತರ ಮತ್ತು ಬಂಧುವರ್ಗದವರಿಂದ ಕೇಳಿರಬಹುದು. ಅಥವಾ ಸ್ವತಃ ನಮ್ಮ ಅನುಭವಕ್ಕೇ ಬಂದಿರಬಹುದು. ಹಾಗಾದರೆ ನಿಜಕ್ಕೂ ಸಮಯದ ಅಭಾವವಾಗುತ್ತಿದೆಯೇ? ಇದಕ್ಕೆ ಉತ್ತರವಾಗಿ ಹೌದು ಅಥವಾ ಇಲ್ಲ ಅನ್ನುವುದಲ್ಲ ಇಲ್ಲಿ ಮುಖ್ಯ. ಬದಲಾಗಿ, ನಾವುಗಳು "ಏಕೆ ನಮಗೆ ಹೀಗಾಗುತ್ತಿದೆ. ಸಮಯದ ಕೊರತೆ ಏಕೆ ಕಾಡುತ್ತಿದೆ" ಎಂದು ಪ್ರಶ್ನೆ ಮಾಡಿಕೊಳ್ಳುವುದು ಹೆಚ್ಚು ಪ್ರಸ್ತುತವೆನಿಸುತ್ತದೆಯಲ್ಲವೇ.

ದಿನ ಬೆಳಗಾದರೆದ್ದು, ಒಂದಿಷ್ಟೂ ಸಮಯವಿಲ್ಲದವರಂತೆ ಅಲೆದಾಡಿ, ಸುಸ್ತಾಗಿ, ಮಲಗುವ ಸಮಯದಲ್ಲಿ, ಈ ದಿನ ನನಗೆ ಸಂತಸ ತಂದಿತೇ ಎಂದು ಗೊಂದಲಮಯವಾಗಿ ಯೋಚಿಸುವುದು ಸಾಮಾನ್ಯವಾಗುತ್ತಿದೆಯೇನೋ. ಉಸಿರಾಡುವ ಬೊಂಬೆಗಳಾಗಿ ಜೀವಿಸುತ್ತಿದ್ದೀವೇನೋ ಎಂದು ಅನೇಕಸಲ ಭಾಸವಾಗುವುದುಂಟು.

ಇಂತಹ ಪರಿಸ್ಥಿತಿಯಲ್ಲಿ, ನಮಗೆ ಬೇಕಿರುವುದು ಸರಳವಾದ ಆತ್ಮಾವಲೋಕನ. ದಿನದ ಇಪ್ಪತ್ನಾಲ್ಕು ಘಂಟೆಗಳಲ್ಲಿ ಕೇವಲ ಹತ್ತು ಹದಿನೈದು ನಿಮಿಷ ಬೇರೇನೂ ಯೋಚಿಸದೆ, ನಮಗಾಗಿ, ನಾವು ಯಾವ ಕೆಲಸವನ್ನು ಮೊದಲು ಮಾಡಬೇಕು, ಮತ್ತೊಂದು ಕೆಲಸವನ್ನು ಒಪ್ಪಿಕೊಳ್ಳುವಷ್ಟು ಸಮಯವಿದೆಯೇ ಇತ್ಯಾದಿಗಳ ಒಂದು ಪುಟ್ಟ ಪಟ್ಟಿಯನ್ನು ತಯಾರುಮಾಡಿದರೆ (ಕಾಗದದ ಮೇಲೆ ಬರೆಯಬೇಕೆಂದಿಲ್ಲ, ಯೋಚಿಸಿದರೂ ಸಾಕು), ಆ ದಿನದ ಕಾರ್ಯಚಟುವಟಿಕೆಯ ಸ್ಪಷ್ಟತೆ ನಮಗರಿವಾಗುತ್ತದೆ. ಇದರಿಂದ ಆಯಾ ಕೆಲಸಗಳನ್ನು ಬಹುತೇಕ ಆಯಾ ಸಮಯದಲ್ಲಿ ಮಾಡಲು ಸಾಧ್ಯವಾಗುತ್ತದೆ ಕೂಡ. ಇವೆಲ್ಲವನ್ನೂ ಮೀರಿ, ನಮಗೆ ಸಮಯ ಸಿಗುತ್ತಿಲ್ಲವೆಂದಾದರೆ, ಬೇರಾವ ಕ್ರಿಯೆಗಳು ನಮ್ಮನ್ನು ಪ್ರಭಾವಗೊಳಿಸಿ ನಮ್ಮ ಸಮಯವನ್ನು ಕಿತ್ತುಕೊಳ್ಳುತ್ತಿದೆ ಎಂದು ವಿಮರ್ಶೆ ಮಾಡಿಕೊಳ್ಳುವುದು ಹೆಚ್ಚು ಸೂಕ್ತವೆಂದು ತೋರುತ್ತದೆ. ಒಟ್ಟಿನಲ್ಲಿ ಆತ್ಮಾವಲೋಕನವಿಲ್ಲದೆ ಸಮಸ್ಯೆಗೆ ಪರಿಹಾರ ಅಪೇಕ್ಷಿಸುವುದು ಸಮಂಜಸವೆನಿಸುವುದಿಲ್ಲ.

ಈ ಕ್ರಿಯೆ ಶುರು ಮಾಡಲೊಂದು ನೆಪ ಬೇಕೇ? ಸೆಪ್ಟೆಂಬರಿನಲ್ಲಿ ನವರಾತ್ರಿ ಶುರುವಾಗುತ್ತಿದೆ. ಅನೇಕರು ಈ ಒಂಬತ್ತು ದಿನಗಳಲ್ಲಿ ಮೌನಕ್ಕೆ ಶರಣಾಗಿ ಅಂತರ್ಮುಖಿಗಳಾಗುವುದನ್ನು ನಾವು ಕೇಳಿರುತ್ತೇವೆ. ಒಂಬತ್ತು ದಿನ ಬೇಡ. ದಿನಕ್ಕೆ ಒಂಬತ್ತು ನಿಮಿಷದಂತೆ ನಮಗಾಗಿ ಅಷ್ಟು ಸಮಯವನ್ನು ಮೀಸಲಿಟ್ಟು, ಆ ಸುಸಮಯದಲ್ಲಿ, ನಮ್ಮ ಮನಸಿನ ಇಚ್ಛೆಯನ್ನು ಅರಿತು, ನಮಗಿರುವ ಸುಜ್ಞಾನವನ್ನು ಬಳಸಿ, ಅದನ್ನು ಪರಾಂಬರಿಸಿ, ಕ್ರಿಯೆಯಾಗಿ ಮಾರ್ಪಡಿಸೋಣವೇ! ಇದರಿಂದ ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿ ಸ್ವರೂಪಿಣಿಯ ಆರಾಧನೆಯಾದ ನವರಾತ್ರಿಯೂ ಅರ್ಥಪೂರ್ಣವಾದೀತು. ಮತ್ತು ಇದರಿಂದ ನಮ್ಮೊಳಗಿರುವ ಶಕ್ತಿಯ ಅನುಭವವಾಗಿ ಸತ್ಕರ್ಮಗಳ ಜಂಬೂಸವಾರಿ ವಿಜೃಂಭಣೆಯಿಂದ ನಡೆಯುವಂತಾಗುತ್ತದೆ. ಈ ತರಹದ ಒಂದು ಪ್ರಯತ್ನ ಮಾಡುವುದು ಜೀವನದ ಮೇಲಿನ ಶ್ರದ್ಧೆಯ ಒಂದು ಭಾಗವೇ ಅಲ್ಲವೇ ! ▪

ಓದುಗರೆಲ್ಲರಿಗೂ "ನವರಾತ್ರಿಯ ಶುಭಾಶಯಗಳು"

ಮುಂದೆರಡು ತಿಂಗಳ ಪ್ರಮುಖ ದಿನಗಳು

ಸೆಪ್ಟೆಂಬರ್ ಶ್ರೀ ಜಯನಾಮ ಸಂವತ್ಸರ, ದಕ್ಷಿಣಾಯನ, ವರ್ಷ/ಶರದ್ ಋತು, ಭಾದ್ರಪದ/ಆಶ್ವಯುಜ ಮಾಸ

05 ಶು - ಏಕಾದಶಿ
06 ಶ - ತಿರು ಓಣಂ
7 ಭಾ - ಅನಂತ ಪದ್ಮನಾಭವ್ರತ
09 ಮಂ - ಅನಂತನ ಹುಣ್ಣಿಮೆ
12 ಶು - ಸಂಕಷ್ಟಹರ ಗಣಪತಿ ಪೂಜೆ
15 ಸೋ - ಸರ್ ಎಂ ವಿಶ್ವೇಶ್ವರಯ್ಯ ಜನ್ಮ ದಿನ
19 ಶು - ಇಂದಿರಾ ಏಕಾದಶಿ
23/24 ಬು - ಮಹಾಲಯ ಅಮಾವಾಸ್ಯೆ
25 ಗು - ನವರಾತ್ರಿ/ಆಶ್ವಯುಜಮಾಸ ಆರಂಭ

ಅಕ್ಟೋಬರ್ ಶ್ರೀ ಜಯನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಆಶ್ವಯುಜ/ಕಾರ್ತೀಕ ಮಾಸ

02 ಗು - ದುರ್ಗಾಷ್ಟಮಿ, ಮಹಾತ್ಮಾ ಗಾಂಧೀ ಜಯಂತಿ
03 ಶು - ಆಯುಧ ಪೂಜೆ
04 ಶ - ವಿಜಯ ದಶಮಿ
05 ಭಾ - ಬಕ್ರಿದ್
07/08 - ಹುಣ್ಣೀಮೆ
08 ಬು - ವಾಲ್ಮೀಕಿ ಜಯಂತಿ
11 ಶ - ಸಂಕಷ್ಟಹರ ಗಣಪತಿ ಪೂಜೆ
19 ಭಾ - ರಮಾ ಏಕಾದಶಿ
22 ಬು - ನರಕ ಚತುರ್ದಶಿ / ದೀಪಾವಳಿ ಆರಂಭ
23 ಗು - ದೀಪಾವಳಿ ಅಮಾವಾಸ್ಯೆ, ಲಕ್ಷ್ಮೀ ಪೂಜೆ
24 ಶು - ಬಲಿಪಾಡ್ಯಮಿ, ಕಾರ್ತೀಕ ಮಾಸ ಆರಂಭ, ಸ್ಕಂದ ಷಷ್ಠಿ
26 ಭಾ - ಮೊಹರಂ ಆರಂಭ

ಸೆಪ್ಟೆಂಬರು ಐದನೆಯ ತಾರೀಖು ಭಾರತದಲ್ಲಿ ಶಿಕ್ಷಕರ ದಿನ. ಈ ಸಂದರ್ಭದಲ್ಲಿ ಇಪ್ಪತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ಹಳೆಯ ಮೈಸೂರು ಪ್ರಾಂತದಲ್ಲಿ ಶೈಕ್ಷಣಿಕ ರಂಗದಲ್ಲಿ ಅದ್ಭುತ ಸೇವೆ ಸಲ್ಲಿಸಿದ ಎಂ.ಆರ್. ಶ್ರೀನಿವಾಸಮೂರ್ತಿಯವರನ್ನು ನೆನಪಿಗೆ ತರುವುದು ಸಮಯೋಚಿತ. ಎಂತಲೇ ಅವರ ವಿಚಾರವಾಗಿ ಎರಡು ಮಾತನ್ನು ನಿಮ್ಮ ಮುಂದಿಡುತ್ತಿದ್ದೇನೆ.

'ಅಜ್ಜ ಅಜ್ಜಿ, ಮೊಸರಿನ ಬಜ್ಜಿ, ಸಜ್ಜಿಗೆ ತಿಂದು ಹೆಚ್ಚಿತು ಬೊಜ್ಜು'

'ಗುಡ್ಡದ ಮೇಲೆ ರೆಡ್ಡಿಯ ಮದುವೆ, ಬಾಯಿಗೆ ಲಡ್ಡು, ಜೇಬಿಗೆ ದುಡ್ಡು'



ಹೊಸದಾಗಿ ಕನ್ನಡವನ್ನು ಓದಿ ಬರೆಯಲು ಕಲಿಯುತ್ತಿರುವ ಮಕ್ಕಳಿಗೆ ಒತ್ತಕ್ಷರಗಳನ್ನು ಪರಿಚಯಿಸಲು ಇಂತಹ ಪ್ರಾಸಬದ್ಧವಾದ ಕವನಗಳೇ ಸರಿಯಾದ ಬಗೆ ಎಂದು ತಿಳಿದು, ಇದೇ ತೆರನಾದ ನೂರಾರು ಚುಟುಕಗಳನ್ನು ಸೇರಿಸಿ ಕನ್ನಡದ 'ಒಂದನೆಯ ಪುಸ್ತಕ' ವನ್ನು ಬರೆದರು ದಿ॥ ಎಂಆರ್‌ಶ್ರೀ ಯವರು. ಒಂದು ಒತ್ತಕ್ಷರವನ್ನು ವಿವರಿಸುವ ಪ್ರತಿಯೊಂದು ಪುಟದಲ್ಲೂ ಈ ಚುಟುಕಗಳಷ್ಟೇ ಅಲ್ಲದೆ ಗದ್ಯವೂ ಇರುತ್ತಿತ್ತು. ಉದಾಹರಣೆಗೆ: **'ಬಸ್ಸಪ್ಪಾ ಬಾ ಬಸ್ಸಿಗೆ ಹೋಗೋಣವೋ, ಏನು ನಿನ್ನ ಮನಸ್ಸು? ಇಸ್ಸೀ ಬಸ್ಸೂ ಬೇಡ, ಊರೂ ಬೇಡ, ಏಕೋ ಮನಸ್ಸೇ ಇಲ್ಲ; ಅದೇನು ಬಸ್ಸೋ, ಲಾರಿಯೋ?'** ಇತ್ಯಾದಿ. ಪುಸ್ತಕವು ಪ್ರಕಟವಾದದ್ದು ೧೯೫೦ ರ ದಶಕದ ಆರಂಭದಲ್ಲಿ. ಈ ಪುಸ್ತಕವನ್ನು ಬರೆಯುವುದಕ್ಕೆ ಎಂಆರ್ ಶ್ರೀ ಅವರಿಗಿಂತ ಸೂಕ್ತರಾದವರು ಪ್ರಾಯಶಃ ಬೇರೆ ಯಾರೂ ಇರಲಾರರು. ಅವರ ಪೂರ್ವೀಕರು ಆಂಧ್ರಪ್ರದೇಶದ ಗೋಲ್ಕೊಂಡ ಪ್ರಾಂತದಿಂದ ಬಂದ ಬ್ರಾಹ್ಮಣರು. ಮನೆ ಮಾತು ತೆಲುಗು.

ಅವರು ಹುಟ್ಟಿದ್ದು ೧೮೯೨ ರಲ್ಲಿ. ೧೯೧೫ ರಲ್ಲಿ B.A. ಪದವಿಯನ್ನು ಗಳಿಸಿ ಶಿವಮೊಗ್ಗ ಪ್ರೌಢಶಾಲೆಯ ಅಧ್ಯಾಪಕರಾಗಿ ವೃತ್ತಿ ಆರಂಭಿಸಿದರು ಅನಂತರ ತೀರ್ಥಹಳ್ಳಿಯ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾಗಿದ್ದಾಗ ಕುವೆಂಪು ಅವರು ಇವರ ಶಿಷ್ಯರಾಗಿದ್ದರು. ತಮ್ಮ ವೃತ್ತಿ ಜೀವನದ ಬಹು ಭಾಗವನ್ನು ವಿದ್ಯಾ ಇಲಾಖೆಯ ಸೇವೆಯಲ್ಲೇ ಮೊದಲು ಅಧ್ಯಾಪಕರಾಗಿ ನಂತರ ಶಾಲಾ ಇನ್ಸ್‌ಪೆಕ್ಟರಾಗಿ, ಅನಂತರ ಜಿಲ್ಲಾ ವಿದ್ಯಾಧಿಕಾರಿಗಳಾಗಿ ಕಳೆದರು.

ಆಗಿನ ಕಾಲದ ಎಂದರೆ ೧೯೨೦-೩೦ರ ದಶಕಗಳಲ್ಲಿ ಪ್ರೈಮರಿ ಉಪಾಧ್ಯಾಯರುಗಳಲ್ಲಿ ಅನೇಕರ ಜೀವನ ಸ್ಥಿತಿ ನಿಜಕ್ಕೂ ಶೋಚನೀಯ. ಅವರಿಗೆ ಬರುತ್ತಿದ್ದ ಸಂಬಳ ೧೭-೧-೨೦ ರೂಪಾಯಿ ಈ ಬಗೆಯದು; ವೃತ್ತಿ ಪ್ರಾರಂಭಿಸಿದಾಗ ೧೭ ರೂಪಾಯಿ ಸಂಬಳ, ಅನಂತರ ವರ್ಷಕ್ಕೆ ಒಂದು ರೂಪಾಯಿ increment! ಸ್ವಂತ ಜಮೀನೊ, ಅಥವಾ ಬೇರೆ ಏನಾದರೂ ಕಸುಬೋ ಇಲ್ಲದಿದ್ದರೆ, ಎರಡು ಊಟಕ್ಕೂ ಕಷ್ಟ. ಸ್ವಭಾವತಃ ಕರುಣಾರ್ದ್ರ ಹೃದಯಿಗಳಾಗಿದ್ದ ಎಂಆರ್‌ಶ್ರೀ ಅವರು ಈ ಬಡ ಮೇಸ್ಟರುಗಳ ಬವಣೆಯನ್ನು ಸ್ವಲ್ಪವಾದರೂ ನೀಗಿಸಲು ಮಾಡಿದ ಪ್ರಯತ್ನ ಅಷ್ಟಿಷ್ಟಲ್ಲ. ತಮ್ಮ ಇನ್ಸ್‌ಪೆಕ್ಟರ್ ಗಿರಿಯ ಅನುಭವಗಳನ್ನು **'ರಂಗಣ್ಣನ ಕನಸಿನ ದಿನಗಳು'** ಎಂಬ ಅಮರವಾದ ಕೃತಿಯಲ್ಲಿ ಬಹಳ ಸ್ವಾರಸ್ಯವಾಗಿ ಬರೆದರು. ಇದರಲ್ಲಿನ ಒಂದೊಂದು ಪ್ರಸಂಗವೂ ಮರೆಯಲಾರದಂಥವು. ಉದಾಹರಣೆಗೆ:

೧. ಬೋರ್ಡು ಒರೆಸುವ ಬಟ್ಟೆ - ಆಗಿನ ಕಾಲದಲ್ಲಿ ಮೇಸ್ಟರುಗಳು ಶಾಲೆಯಲ್ಲಿದ್ದಾಗ ರುಮಾಲನ್ನೋ, ಟೋಪಿಯನ್ನೋ ಕಡ್ಡಾಯವಾಗಿ ಧರಿಸಲೇ ಬೇಕಿತ್ತು. ಒಬ್ಬ ಉಪಾಧ್ಯಾಯರು ತಿಂಗಳಿಗೆ ನಾಲ್ಕಾಣೆಯಂತೆ ಮಂಜೂರಾಗುತ್ತಿದ್ದ **ಸಾದಿಲ್ವಾರು** ಮೊಬಲಗಿನಿಂದ (Money for stationery supplies) ವರ್ಷಪೂರ್ತಿ ಏನನ್ನೂ ಕೊಂಡುಕೊಳ್ಳದೆ, ವರ್ಷದ ಕೊನೆಯಲ್ಲಿ ಉಳಿದ ಎರಡು ರೂಪಾಯಿಗೆ ಒಂದು ಉದ್ದದ ಬಟ್ಟೆಯನ್ನು ಕೊಂಡು ಅದನ್ನೇ ರುಮಾಲಾಗಿ ಉಪಯೋಗಿಸುತ್ತಿದ್ದರು. ರಂಗಣ್ಣನು ಒಮ್ಮೆ ಶಾಲಾ ತನಿಖೆ ಮಾಡುವಾಗ ಏನನ್ನೋ ಬೋರ್ಡಿನ ಮೇಲೆ ಬರೆದು ಅದನ್ನು ಅಳಿಸಲು ಬಟ್ಟೆಯನ್ನು ಕೇಳಿದಾಗ, ಪಾಪ, ಆ ಬಡ ಉಪಾಧ್ಯಾಯರು ತಮ್ಮ ರುಮಾಲನ್ನೇ ತೆಗೆದು ಬೋರ್ಡನ್ನು ಒರೆಸಿಬಿಟ್ಟರು. ಪರಿಸ್ಥಿತಿ ಅರ್ಥವಾದಾಗ ರಂಗಣ್ಣನಿಗೆ ಕೋಪ ಬರಲಿಲ್ಲ; ಕಣ್ಣೀರು ತಡೆಯಲಾಗಲಿಲ್ಲ.

೨. ಸೀತಮ್ಮ ಎಂಬ ಪ್ರೈಮರಿ ಅಧ್ಯಾಪಕಿ ಹಳೆಯ ಕಾಲದ ಒಬ್ಬ ಬಾಲ ವಿಧವೆ. ಆಕೆ ಪಾಠ ಮಾಡುತ್ತಿದ್ದಾಗ ರಂಗಣ್ಣನೂ, D.E.O. ಸಾಹೇಬರೂ inspection ಗೆ ಬಂದರು. ಆಕೆ ಒಂದು ಪದವನ್ನು ಮಕ್ಕಳಿಗೆ ವಿವರಿಸುವಾಗ **ಶತ್ರು = ವೈರಿ** ಎಂದು ಬರೆಯುವ ಬದಲು **ಶತೃ = ವೈರಿ** ಎಂದು ಬರೆದರು. ಇಷ್ಟಕ್ಕೇ ಕೋಪಗೊಂಡ ಆ strict D.E.O. ಸಾಹೇಬರು ಕೆಂಡ ಕೆಂಡವಾಗಿ ಆಕೆಯ ಕಡೆ ನೋಡಿದರು. ರಂಗಣ್ಣನೇನೋ ಸಮಾಧಾನವಾಗಿ 'ಅಮ್ಮ, ಒಂದು ಸಲ ಪುಸ್ತಕವನ್ನು ನೋಡಿ ಸರಿಯಾಗಿ ಬರೆಯಿರಿ' ಎಂದು ಹೇಳಿದರೂ, ಈ ಇಬ್ಬರು ಸಾಹೇಬರುಗಳ ಎದುರಿನಲ್ಲಿ ಆ ಹೆಣ್ಣುಹೆಂಗಸಿನ ಇದ್ದಬದ್ದ ಧೈರ್ಯವೆಲ್ಲ ಕುಸಿದುಬಿತ್ತು. ಆಕೆ ಪುಸ್ತಕವನ್ನೂ ನೋಡಲಿಲ್ಲ, ಮುಂದೆ ಪಾಠವನ್ನೂ ಮಾಡಲಿಲ್ಲ. ರಂಗಣ್ಣನೇ ಪದವನ್ನು ಸರಿಯಾಗಿ ಬರೆದು 'ಮಕ್ಕಳನ್ನು ಮನೆಗೆ ಬಿಟ್ಟುಬಿಡಿ, ಹೊತ್ತಾಗಿ ಹೋಯಿತು' ಎಂದು ಹೇಳಿ ಹೊರಬಂದನು.

ಈ ಕಥೆ ಇಷ್ಟಕ್ಕೆ ಮುಗಿಯಲಿಲ್ಲ. ಮರುದಿನ D.E.O. ಸಾಹೇಬರು ಸೀತಮ್ಮನಿಗೆ ಎಂಟಾಣೆ ಜುಲ್ಮಾನೆ ಹಾಕಿದ್ದರು. ಎಂಟಾಣೆ ಆಕೆಗೆ ದೊಡ್ಡ ಮೊತ್ತವೇ ಸರಿ; ಅದಕ್ಕಿಂಥ ಹೆಚ್ಚಾಗಿ ಈ ಜುಲ್ಮಾನೆಯಿಂದ ತನ್ನ ಹೆಸರಿಗೇ, ವೃತ್ತಿಗೇ ಕಳಂಕ ಬಂತೆಂದು ಆಕೆ ಕಂಗಾಲಾದರು.

(ಮುಂದಿನ ಪುಟ ನೋಡಿ ...)

ನೇರವಾಗಿ ರಂಗಣ್ಣನ ಮನೆಗೆ ಹೋಗಿ ಆತನ ಪತ್ನಿಗೆ ತಮ್ಮ ಗೋಳನ್ನು ಹೇಳಿಕೊಂಡರು. ರಂಗಣ್ಣ ಮನೆಗೆ ಬಂದಾಗ ಆತನ ಮಡದಿ ತನ್ನ ಗಂಡನೇ ಈ ಜುಲ್ಮಾನೆ ಹಾಕಿದ್ದೆಂದು ಭಾವಿಸಿ ತುಂಬ ಕೋಪಗೊಂಡಿದ್ದರು. ರಂಗಣ್ಣನಿಗೆ ಇದು ಯಾವುದೂ ತಿಳಿದಿರಲಿಲ್ಲ. ನಿಜ ತಿಳಿದಾಗ ಆತನ ಪತ್ನಿಯ ಕೋಪ ಹೋದರೂ, ರಂಗಣ್ಣನಿಗೆ ಬಹಳ ದುಃಖವಾಗಿತ್ತು. ಅಂತೂ ಶತ ಪ್ರಯತ್ನ ಮಾಡಿ D.E.O. ಸಾಹೇಬರಿಂದ ಜುಲ್ಮಾನೆಯನ್ನು ವಜಾ ಮಾಡಿಸಿದನು. ಇದರಿಂದ ಸೀತಮ್ಮನವರಿಗೆ ಆದ ಸಂತೋಷ ಬಣ್ಣಿಸಲಾಗದು.

ಮೇಲೆ ಹೇಳಿದ ಎರಡು ಸಂದರ್ಭಗಳು ಗಂಭೀರವಾದದ್ದಾದರೂ, 'ಕನಸಿನ ದಿನಗಳಲ್ಲಿ' ಅನೇಕ ಹಾಸ್ಯ ಭರಿತ ಪ್ರಸಂಗಗಳೂ, ಸನ್ನಿವೇಶಗಳು ಇವೆ. ಅವುಗಳಲ್ಲಿ ಒಂದೆರಡನ್ನು ಮಾತ್ರ ಇಲ್ಲಿ ಉಲ್ಲೇಖಿಸುತ್ತೇನೆ.

ಬೆಳಗಿನ ಹೊತ್ತು ಮಕ್ಕಳಿಗೆ ಪಾಠ ಹೇಳಿ, ಮಧ್ಯಾಹ್ನ ಅದೇ ಶಾಲೆಯಲ್ಲಿ ಹಜಾಮತ್ ಶಾಲೆಯನ್ನು ತೆರೆದು ಎರಡು ಕಾಸು ಹೆಚ್ಚು ಸಂಪಾದಿಸುತ್ತಿದ್ದ ಮೇಸ್ಟರು ಮುನಿಶಾಮಿಯ ಕಥೆ ಎಲ್ಲರಿಗೂ ನಗು ಬರಿಸುವಂಥದು. ಈ ಬಗೆಯ ಇನ್ನೊಂದು ಪ್ರಕರಣ ವೇಷದಲ್ಲಿ ಜರ್ಬಾಗಿ ಕಾಣಿಸುತ್ತಿದ್ದ ಇನ್ನೊಬ್ಬ ಉಪಾಧ್ಯಾಯರನ್ನು ಕುರಿತದ್ದು. ಈ ವಿಷಯದಲ್ಲಿ ರಂಗಣ್ಣನ ಭ್ರಮನಿರಸನವಾದದ್ದು ಆ ಮೇಸ್ಟರು ವೃತ್ತಿಯಲ್ಲಿ ಅಗಸರೆಂದೂ, ಅವರು ಧರಿಸಿದ್ದ ಬಟ್ಟೆ, ಊರ ಗೌಡರ ಮನೆಯಿಂದ ಒಗೆಯಲು ಬಂದದ್ದೆಂದೂ ತಿಳಿದಾಗ.

ಇನ್ನೊಮ್ಮೆ ರಂಗಣ್ಣನು ಹಳ್ಳಿಗಾಡಿನಲ್ಲಿ inspection ಮಾಡಲು ಹೊರಟಿದ್ದಾಗ ಮಳೆ ಬಂದು ತೊರೆಯೊಂದು ತುಂಬಿ ಹರಿಯುತ್ತಿತ್ತು. ಆಗ ಷರಾಯಿ ಒದ್ದೆಯಾಗ ಬಾರದೆಂದು ಅದನ್ನು ತೆಗೆದು ಒಂದು ಕೈಯಲ್ಲಿಟ್ಟುಕೊಂಡು ಮತ್ತೊಂದು ಕೈಯಿಂದ ಸೈಕಲ್ಲನ್ನು ತಳ್ಳುತ್ತ ದಾಟಿದ್ದೇನೋ ಆಯಿತು. ಆದರೆ ಹಾಕಿಕೊಂಡಿದ್ದ ಒಳ ಚೆಡ್ಡಿ ಸಂಪೂರ್ಣವಾಗಿ ಒದ್ದೆಯಾಯಿತು. ಇದನ್ನು ಮಾನಭಂಗವಾಗದಂತೆ ಆ ಹಗಲಲ್ಲಿ, ಅದೂ ನಡು ಬಯಲಲ್ಲಿ ತೆಗೆದು ಒಣಗಿದ ಷರಾಯನ್ನು ಹೇಗೆ ಹಾಕಿಕೊಳ್ಳಬೇಕೆಂಬ ಸಮಸ್ಯೆಯನ್ನು ರಂಗಣ್ಣನು ಪರಿಹರಿಸಿದ ಬಗೆ ನಿಜಕ್ಕೂ ವಿನೋದವಾಗಿದೆ. ಇನ್ನೊಂದು ಪ್ರಸಂಗ ತನಗೆ ಪುಢಾರಿಗಳ ಬೆಂಬಲವಿತ್ತೆಂದು ಯಾರಿಗೂ ಹೆದರದೆ ದೊಡ್ಡ ದೊಣ್ಣೆಯನ್ನು ಎತ್ತಿಕೊಂಡು ಪುಂಡಾಟ ಮಾಡುತ್ತಿದ್ದ ಉಗ್ರಪ್ಪ ಎಂಬ ಮೇಸ್ಟರನ್ನು ರಂಗಣ್ಣನು ಧೈರ್ಯದಿಂದ suspend ಮಾಡಿದ್ದು. ಇದರ ಪರಿಣಾಮ ದೊಡ್ಡ ಮಾರಾಮಾರಿ ಎಂದು ಎಲ್ಲರೂ ಹೆದರಿದ್ದರು. ಆದರೆ ಆದದ್ದೇ ಬೇರೆ. ಉಗ್ರಪ್ಪನು ಕೆಲಸಕ್ಕೆ ರಾಜೀನಾಮೆ ಕೊಟ್ಟು ಸಂನ್ಯಾಸವನ್ನು ಸ್ವೀಕರಿಸಿ, ಸಹನೆಯೇ ಮೂರ್ತಿವೆತ್ತಂತ್ತಿದ್ದ ಶಾಂತವೀರಸ್ವಾಮಿಗಳಾಗಿ ಮಾರ್ಪಾಟಾದನು!

ಕನಸಿನ ದಿನಗಳಲ್ಲಿ ನಮಗೆ ಮುಖ್ಯವಾಗಿ ಎದ್ದು ಕಾಣುವುದು ಏನೆಂದರೆ, ಬಡ ಮೇಸ್ಟರುಗಳ ಕಷ್ಟಕೋಟಲೆಗಳನ್ನು ಆದಷ್ಟು ಕಡಿಮೆ ಮಾಡುವ ಸಲುವಾಗಿ ರಂಗಣ್ಣನು, ಎಂದರೆ ಎಂಆರ್‌ಶ್ರೀ ಯವರು, ಹಗಲಿರುಳೂ ಶ್ರಮಿಸಿದ್ದು. ಉಪಾಧ್ಯಾಯರು ತಮ್ಮ ದೈನಂದಿನ ತಾಪತ್ರಯಗಳನ್ನು ವರ್ಷದಲ್ಲಿ ಒಂದೆರಡು ದಿನವಾದರೂ ಮರೆತು ತಾಲೂಕಿನ ಇತರ ಅಧ್ಯಾಪಕರೊಂದಿಗೆ ಬೆರೆತು ವಿಚಾರ ವಿನಿಮಯಕ್ಕೂ ತಮಗೆ ಏನಾದರೂ ಹೆಚ್ಚಿನ ಕಲಾಕೌಶಲಗಳಿದ್ದರೆ ಅವನ್ನು ಪ್ರದರ್ಶಿಸುವುದಕ್ಕೂ ಅವಕಾಶವಾಗುವಂತೆ ಎರಡು ದಿನದ ಒಕ್ಕೂಟವನ್ನು ಏರ್ಪಡಿಸಿದರು. ಇದಕ್ಕೆ ಬೇಕಾದ ಊಟದ ಮತ್ತು ಇತರ ಸಾಮಗ್ರಿಗಳನ್ನು ಸರಬರಾಜು ಮಾಡುವ ಜವಾಬ್ದಾರಿ ಹಳ್ಳಿಯ ಮತ್ತು ಊರುಗಳ ಮುಖಂಡರದು, ಅಡಿಗೆಯನ್ನೇನೋ ಕೆಲವು ಮೇಸ್ಟರುಗಳೇ ಮಾಡುತ್ತಿದ್ದರು. ಈ ಸಮಾರಂಭಗಳು ತುಂಬ ಯಶಸ್ವಿಯಾದವು; ಸ್ವಭಾವತಃ ಸಿಡಿಮಿಡಿಯುತ್ತಿದ್ದ D.E.O. ಸಾಹೇಬರೂ ಸಂತುಷ್ಟರಾದರು.

'ರಂಗಣ್ಣನ ಕನಸಿನ ದಿನಗಳು' ಒಂದು ಅಪೂರ್ವ ಅನುಪಮ ಕೃತಿ. ಶಾಲಾ ಇನ್‌ಸ್ಪೆಕ್ಟರನ ಅನುಭವಗಳನ್ನು ಇಷ್ಟು ಸ್ವಾರಸ್ಯವಾಗಿ ಬಿಂಬಿಸಿರುವ ಗ್ರಂಥ ಪ್ರಾಯಶಃ ಮತ್ತಾವ ಭಾಷೆಯಲ್ಲೂ ಇರಲಾರದು; ನಾನಂತೂ ನೋಡಿಲ್ಲ. ಎಲ್ಲ ಕನ್ನಡಿಗರೂ ಒಮ್ಮೆಯಾದರೂ ಓದಬೇಕಾದ ಪುಸ್ತಕ ಇದು.

೧೯೩೯ರಲ್ಲಿ ಎಂಆರ್‌ಶ್ರೀ ಯವರನ್ನು ಇಂಗ್ಲಿಷ್-ಕನ್ನಡ ನಿಘಂಟಿನ ಕಾರ್ಯಕ್ಕಾಗಿ ವಿದ್ಯಾ ಇಲಾಖೆಯಿಂದ ಎರವಲು ಪಡೆಯಲಾಯಿತು. ೧೯೪೩ರಲ್ಲಿ ನಿಘಂಟಿನ ಸಮಿತಿಯ ಅಧ್ಯಕ್ಷ ಬೆಳ್ಳಾವೆ ವೆಂಕಟನಾರಣಪ್ಪನವರು ನಿಧನರಾಗಲು ಎಂಆರ್‌ಶ್ರೀ ಯವರೇ ಅಧ್ಯಕ್ಷರಾಗಿ ನಿಘಂಟಿನ ಕೆಲಸವನ್ನು ಪೂರ್ತಿ ಮಾಡಿದರು. ಅನಂತರ ವಿದ್ಯಾ ಇಲಾಖೆಗೆ ಮರಳಿ, ಕೋಲಾರ ಜಿಲ್ಲೆಯ ವಿದ್ಯಾಧಿಕಾರಿಗಳಾಗಿ, ೧೯೪೯ರಲ್ಲಿ ನಿವೃತ್ತರಾದರು. ಇದಲ್ಲದೆ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿಯಲ್ಲಿ ಇಪ್ಪತ್ತು ವರ್ಷ ದುಡಿದರು; ಅದರ ಅಧ್ಯಕ್ಷರೂ ಆಗಿದ್ದರು.

'ರಂಗಣ್ಣನ ಕನಸಿನ ದಿನಗಳು' ಅಲ್ಲದೆ, ಎಂಆರ್‌ಶ್ರೀ ಅವರು **'ಸಾವಿತ್ರಿ'** **'ಮಹಾತ್ಯಾಗ'** ಎಂಬ ಕಾದಂಬರಿಗಳನ್ನೂ, **'ನಾಗರಿಕ'**, **'ಕಂಠೀರವ ವಿಜಯ'** ಎಂಬ ನಾಟಕಗಳನ್ನೂ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ **'ಭಕ್ತಿ ಭಂಡಾರಿ ಬಸವಣ್ಣನವರು'** ಎಂಬ ವಿಮರ್ಶಾತ್ಮಕ ಜೀವನ ಚರಿತ್ರೆಯನ್ನೂ ರಚಿಸಿದರು. ಜಗಜ್ಯೋತಿ ಬಸವಣ್ಣನವರಿಗೆ ಭಕ್ತಿ ಭಂಡಾರಿ ಎಂಬ ಹೆಸರು ಜನಪ್ರಿಯವಾಗಲು ಈ ಗ್ರಂಥವೇ ಕಾರಣ ಎಂದರೆ ಅತಿಶಯೋಕ್ತಿಯಲ್ಲ.

(ಮುಂದಿನ ಪುಟ ನೋಡಿ ...)

ಎಂಆರ್‌ಶ್ರೀ ಅವರು ಬೆಳ್ಳಗೆ ಎತ್ತರಕ್ಕೆ ಇದ್ದ ಸ್ಫುರದ್ರೂಪಿಗಳು. ಆರೋಗ್ಯವಂತರೂ, ಶಿಸ್ತಿನ ಜೀವನವನ್ನು ಮಾಡುತ್ತಿದ್ದರಿಂದ ಧೃಢಕಾಯರೂ ಆಗಿದ್ದರು. ಒಳ್ಳೆಯ ಭೋಜನಪ್ರಿಯರು. ಇಂಥವರು ತಮ್ಮ ೬೧ನೆಯ ವಯಸ್ಸಿನಲ್ಲೇ ಹಠಾತ್ತನೆ ಕಾಲರಾ ವ್ಯಾಧಿಗೆ ತುತ್ತಾಗಿದ್ದು ಒಂದು ವಿಪರ್ಯಾಸವೇ ಸರಿ. ಅವರ ಅಂತಿಮ ದರ್ಶನಕ್ಕೆ ನೂರಾರು ಮಂದಿ ಗಣ್ಯವ್ಯಕ್ತಿಗಳು ಬಂದು ಸೇರಿದ್ದರು. ಮೃತರನ್ನು ರುದ್ರಭೂಮಿಗೆ ತೆಗೆದುಕೊಂಡು ಹೋಗುವ ಸಮಯ ಬಂದಿತು. ಆಗ ಅಲ್ಲಿದ್ದ ಕನ್ನಡದ ಹೆಸರಾಂತ ಸಾಹಿತಿಗಳಾದ ವಿ ಸೀತಾರಾಮಯ್ಯನವರು ಹೀಗೆ ಬರೆದಿದ್ದಾರೆ: (ಎಂಆರ್‌ಶ್ರೀಯವರ) ಮಡದಿ ಬಂದರು. ಕಾಲು ಬೆರಳು ಮುಟ್ಟಿ ಕಣ್ಣಿಗೊತ್ತಿಕೊಂಡು ಎರಡು ಮಾತನಾಡಿಕೊಂಡರು (ತೆಲುಗಿನಲ್ಲಿ) 'ಹೇಗೆ ಹೋದಿರಿ, ಹೇಗೆ ಬರುತ್ತೀರಿ? ನನ್ನ ತಂದೆ, ನನ್ನ ದೇವರೇ! ಹೋಗಿ ಬನ್ನಿ' ಎಂದು ಕಳಿಸಿಕೊಟ್ಟರು. ದೇಹ ಸಾಗಿದ ಬಹುಕಾಲದ ಮೇಲೂ ಯಾರು ಮಾತನಾಡಿಸಿದರೂ ಉತ್ತರ ಕೊಡದೆ ಸುಮ್ಮನೆ ಇದ್ದರು - ಮೇಲೆಬಿದ್ದ ಸುತ್ತಲಿದ್ದ ಮಕ್ಕಳು ಮರಿಮಕ್ಕಳನ್ನೂ ಲಕ್ಷಿಸದೆ. ಅವರ ಮೂಕಶೋಕ ಎಲ್ಲರ ಮನಸ್ಸನ್ನೂ ಮತ್ತೊಮ್ಮೆ ಕರಗಿಸಿತು.

ಕನ್ನಡ ಸಾಹಿತ್ಯಕ್ಕೂ, ಕರ್ನಾಟಕದ ಶೈಕ್ಷಣಿಕ ರಂಗಕ್ಕೂ, ಎಂಆರ್‌ಶ್ರೀ ಅವರು ಸಲ್ಲಿಸಿರುವ ಸೇವೆ ಅಪಾರವಾದುದು; ಎಂದೆಂದಿಗೂ ಮರೆಯಲಾರದು. (ಈ ಬರಹವು ಲೇಖಕರು ಸೆಪ್ಟೆಂಬರ್ ೯, ೨೦೧೨ ರಲ್ಲಿ ಎಸ್.ಬಿ.ಎಸ್ ರೇಡಿಯೋದಲ್ಲಿ ಪ್ರಸಾರಮಾಡಿದ ಭಾಷಣದ ಪರಿಷ್ಕೃತ ಆವೃತ್ತಿ) ▪

ಅಭಿನಂದನೆಗಳು

ಪ್ರತಿಭಾವಂತರು ಎನ್ನುವ ಮಾತು ಎಲ್ಲರಿಗೂ ಬೆನ್ನುತಟ್ಟಿ ಆಡುವ ನುಡಿಯಲ್ಲ ಬಿಡಿ. ಮೈಗೂಡಿದ ಕಲೆ, ಆ ಕಲೆಯನ್ನು ಬರೀ ಹವ್ಯಾಸವಾಗಿಟ್ಟುಕೊಳ್ಳದೆ ಪ್ರತಿಸಲದ ಯೋಜನೆಯ ಮೆಟ್ಟಿಲನ್ನು ಮೆಟ್ಟಿ ಮೇಲಿಂದ ಮೇಲೆ ಏರಿ ಮೆಚ್ಚುಗೆ ಮಾತ್ರವಲ್ಲದೇ ಪ್ರತಿಸಲ ಪ್ರಶಸ್ತಿಗಳ ಆಸ್ತಿಯನ್ನೂ ಹೆಗಲೇರಿಸುತ್ತಿರುವ ನಿದರ್ಶನಕ್ಕೆ ನಮ್ಮ ಸುದರ್ಶನ್ ಹೆಮ್ಮೆಯ ಸಿಡ್ನಿಯ ಕನ್ನಡಿಗರಾಗಿದ್ದಾರೆ.

ರಂಗಭೂಮಿ ಕಲಾವಿದರಾದ ಮಾಸ್ಟರ್ ಹಿರಣ್ಣಯ್ಯನವರು ಹೇಳಿದ ಮಾತು ನೆನೆಪಿಗೆ ಬರುತ್ತದೆ. ಕವಿ-ಕಾವ್ಯಕ್ಕಿಂತ ವಿಮರ್ಶಕನೇ ಸರ್ವಶ್ರೇಷ್ಟ. ಏಕೆಂದರೆ ಕವಿ ತನ್ನ ಕಲ್ಪನಾನುಭವದ ಒಡೆಯನಾದರೆ ವಿಮರ್ಶಕ/ನಿರ್ದೇಶಕ ಕವಿಯ ಮನದಾಳದಲ್ಲಿ ಹುದುಗಿರುವ ವಾಣಿಯ ವೀಣೆಯನ್ನು ನುಡಿಸಿ ನೋಡುಗನಿಗೆ ತಿಳಿಸಿ ತಿದ್ದುತ್ತದೆ, ಭಾವನೆಗಳು ಚಿತ್ರದ ಮೂಲಕ ಚೆಲ್ಲಿ ತೂಕಡಿಸುವ ಮನವನ್ನು ಚಿವುಟಿ ಎಚ್ಚರಿಸುತ್ತದೆ.

ಸುದರ್ಶನ್ ಅವರ ಹೆಜ್ಜೆ ಹೆಜ್ಜೆ ಪರಿಚಯ: ರಂಗಭೂಮಿಯಲ್ಲಿ ಖ್ಯಾತರಾದ ಪ್ರೇಮಾಕಾರಾಂತರ ಬೆನಕ ತಂಡದಿಂದ ಬೆಂಗಳೂರಿನಲ್ಲಿ ಮಾತ್ರವಲ್ಲದೇ ಇಡೀ ಭಾರತದಲ್ಲೆಡೆ ಮಕ್ಕಳ ನಾಟಕ ಕಾರ್ಯಾಗಾರದಲ್ಲಿ ೧೯೮೦ರ ದಶಕದೊಂದಿಗೆ ವೇದಿಕೆಗೆ ಇಳಿದ ಸುದರ್ಶನ್ ಪ್ರಯೋಗರಂಗ ಮತ್ತಿತರ ತಂಡಗಳಲ್ಲಿ ತೊಡಗಿಸಿಕೊಂಡಿದ್ದವರು.

- ಚೌಕಿ ಕವನ ಸಂಗ್ರಹ,
- Nikolai Gogol avara Gamblers ನಾಟಕ ಜುಗಾರಿ ಕೂಟ ಕನ್ನಡಕ್ಕೆ ಭಾಷಾಂತರ,
- ಲೀಲಾಂತ ನಾಟಕ ರಚನೆ. ಈ ನಾಟಕವನ್ನು ಎಂ.ಎಸ್. ಸತ್ಯು ನಿರ್ದೇಶನದಲ್ಲಿ ರಂಗೇರಿತು.

ಚಲನ ಚಿತ್ರ

- HELP ಎಂಬ ಮೊದಲ ಶಾರ್ಟ್ ಫಿಲ್ಮ್ ಬೆಂಗಳೂರಿನಲ್ಲಿದ್ದಾಗ ಪ್ರಾಯದ ಹುಡುಗರಾಗಿದ್ದಾಗಲೇ ನಿರ್ಮಿಸಿದರು.
- ೨೦೦೨ರಲ್ಲಿ ಸಿಡ್ನಿ Tropfest ಅಂತರ ರಾಷ್ಟ್ರೀಯ ಚಲನ ಚಿತ್ರ ಸ್ಪರ್ಧೆಯಲ್ಲಿ CLOUDS WEEP ON THE GREENNESS ಎಂಬ ಆಫ್ಘಾನ್ ಭಾಷೆಯ ಚಿತ್ರ ಟಾಪ್ ೧೬ ಚಿತ್ರಗಳಲ್ಲಿ ಒಂದಾಗಿ ಆಯ್ಕೆಯಾಯಿತು.
- ೨೦೦೩ರಲ್ಲಿ ೩೫mm ಶಾರ್ಟ್ ಫಿಲ್ಮ್ OASIS ರೋಮ್ ಮತ್ತು ಬಾರ್ಸಿಲೋನಾ ಚಿತ್ರೋತ್ಸವಗಳಲ್ಲಿ ತೆರೆಕಂಡು Byron Bay ಚಲನಚಿತ್ರ ಉತ್ಸವದಲ್ಲಿ ಪ್ರಶಸ್ತಿ.
- ೨೦೦೬ರಲ್ಲಿ ಕನ್ನಡದಲ್ಲಿ ಮುಖಾಮುಖಿ ಚಿತ್ರಕ್ಕೆ ಅತ್ಯುತ್ತಮ ಸಂಭಾಷಣೆಗಾಗಿ ರಾಜ್ಯ ಪ್ರಶಸ್ತಿ. ಸುದರ್ಶನ್ ಈ ಚಿತ್ರದ ನಿರ್ದೇಶನ ಕೂಡಾ ಮಾಡಿದ್ದರು.
- **೨೦೧೩ ಇದೀಗ ಬಿಡುಗಡೆಯಾದ ಸುದ್ದಿ - ತಲ್ಲಣ ಚಿತ್ರಕ್ಕೆ ಅತ್ಯುತ್ತಮ ಚಲನಚಿತ್ರ ರಾಜ್ಯ ಪ್ರಶಸ್ತಿ ಹಾಗೂ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರ ಉತ್ಸವದಲ್ಲಿ ಅತ್ಯುತ್ತಮ ಎರಡನೇ ಸ್ಥಾನ.**

ಸುದರ್ಶನ್ ತಮ್ಮ ಮುಂದಿನ ಪ್ರಯತ್ನಕ್ಕೆ ಯಶಸ್ಸು ಸಿಗಲಿ,ಹೆಚ್ಚು ಜನಮನಗಳ ಮುಟ್ಟಲಿ, ಇದಕ್ಕೆ ಎಲ್ಲರ ಸಹಕಾರ ಪ್ರೋತ್ಸಾಹ ಬಹಳ ಮುಖ್ಯ.▪

ವರದಿ: ಕನಕಾಪುರ ನಾರಾಯಣ

ಶುಂಠಿ

ರಾಜಿ ಜಯದೇವ್ (Accredited Practising Dietician)
Mrs Raji Jayadev, B.Sc (Hons) Dip Nutr & Diet (Syd)

ಶುಂಠಿಯ ತವರು ದಕ್ಷಿಣ ಚೈನಾ; ಎರಡು ಸಾವಿರ ವರ್ಷಗಳ ಹಿಂದೆಯೇ ಏಷ್ಯಾ ಖಂಡದ ಇತರ ದೇಶಗಳಿಗೆ ಕಾಲಿಟ್ಟಿತು ಎಂದು ಹೇಳಲಾಗುತ್ತದೆ. ಭಾರತ, ಚೈನಾ ಮತ್ತು ಮಧ್ಯಪೂರ್ವ ದೇಶಗಳ ಪ್ರಾಚೀನ ಬರಹಗಳಲ್ಲಿ ಶುಂಠಿಯ ಉಪಯೋಗಗಳ ಬಗ್ಗೆ ಉಲ್ಲೇಖವಿದೆಯೆಂತೆ. ಸಸ್ಯಶಾಸ್ತ್ರೀಯವಾಗಿ ಇದರ ಹೆಸರು ಜಿಂಜಿಬರ್ ಅಫಿಶಿನೇಲ್ (zingiber officinale). ಈ ಹೆಸರಿನ (ಜಿಂಜಿಬರ್) ಮೂಲ ಶುಂಠಿಯ ಪ್ರಾಕೃತ ಭಾಷೆಯ ಹೆಸರು 'ಸಿಂಗಬೇರ' (ಕೊಂಬಿನ ಆಕಾರ) ಇರಬಹುದೆಂದು ಸಸ್ಯಶಾಸ್ತ್ರಜ್ಞರ ಅಭಿಪ್ರಾಯ.

ಔಷಧೀಯಗುಣಗಳನ್ನು ಹೊಂದಿರುವ ಶುಂಠಿ ಆಯುರ್ವೇದ ಚಿಕಿತ್ಸೆಯಲ್ಲಿ ಪ್ರಮುಖಸ್ಥಾನ ಪಡೆದಿದೆ. ತಲೆನೋವು ನಿವಾರಿಸಲು ಅರೆದ ಶುಂಠಿಯನ್ನು ಹಣೆಗೆ ಹಚ್ಚುತ್ತಿದ್ದರಂತೆ. ಹಲವಾರು ಭಾರತೀಯ ಅಡಿಗೆಗೆ, ಬಗೆ ಬಗೆಯ ಹಸಿ (ಹದ ಮಜ್ಜಿಗೆ) ಮತ್ತು ಬಿಸಿ (ಮಸಾಲ ಚಾಯ್) ಪಾನೀಯಗಳನ್ನು ತಯಾರಿಸಲು ಶುಂಠಿ ಬೇಕೇ ಬೇಕು. ಒಣಶುಂಠಿ ಪುಡಿಯಿಂದ ಹಲವಾರು ಆಹಾರ ಪದಾರ್ಥಗಳನ್ನು ತಯಾರಿಸುತ್ತಾರೆ. ಶುಂಠಿ ಪುಡಿ, ಅಂಟು, ಖರ್ಜೂರ, ಬಾದಾಮಿ, ಒಣಕೊಬ್ಬರಿ, ತುಪ್ಪ ಮತ್ತು ಬೆಲ್ಲ – ಇವುಗಳನ್ನೊಳಗೊಂಡ ಅಂಟಿನುಂಡೆಯನ್ನು (ಕೊಟ್ಲು) ಬಾಣಂತಿಯರಿಗೆ ಪ್ರತಿದಿನ ತಿನ್ನಲು ಕೊಡುತ್ತಾರೆ. ಜಿಂಜರ್ ಬ್ರೆಡ್, ಜಿಂಜರ್ ಏಲ್, ಜಿಂಜರ್ ಬಿಯರ್, ಜಿಂಜರ್ ಕ್ಯಾಂಡಿ, ಜಿಂಜರ್ ಬಿಸ್ಕೀಟ್ ಮತ್ತು ಕೇಕುಗಳು ಸೂಪರ್ ಮಾರ್ಕೆಟ್ ಗಳಲ್ಲಿ ದೊರಕುತ್ತವೆ. ಶುಂಠಿಯಲ್ಲಿರುವ ಪ್ರಮುಖ ಮಿನರಲ್ಸ್ ಮತ್ತು ವಿಟಮಿನ್ಸ್ - calcium, copper, magnesium, zinc, ವಿಟಮಿನ್ B ಮತ್ತು C. ಶುಂಠಿಯಲ್ಲಿ ದೇಹರಕ್ಷಕ anti-oxidant ಇದೆ. ಶುಂಠಿಯ ಅನೇಕ ಔಷಧೀಯ ಗುಣಗಳಿಗೆ ಕಾರಣ, ಶುಂಠಿಯಲ್ಲಿರುವ ಜಿಂಜರಾಲ್ ಗುಂಪಿಗೆ ಸೇರಿದ ರಾಸಾಯನಿಕಗಳು (chemicals).

ಶುಂಠಿಯನ್ನು ಔಷಧಿಯಂತೆ ಸಣ್ಣ ಪ್ರಮಾಣದಲ್ಲಿ ಉಪಯೋಗಿಸಬೇಕು. ಇಲ್ಲದಿದ್ದರೆ ಜೀರ್ಣಾಂಗಗಳಿಗೆ ಹಾನಿಯಾಗುತ್ತದೆ. ಶುಂಠಿಯನ್ನು ಈರುಳ್ಳಿ ಮತ್ತು ಬೆಳ್ಳುಳ್ಳಿಯ ಜೊತೆಗೆ ಉಪಯೋಗಿಸಿದರೆ ಅದರ ಪ್ರಭಾವ ಹೆಚ್ಚೆಂದು ತಿಳಿದುಬಂದಿದೆ.

ಏನಿದರ ಮಹತ್ವ?

ಭಾರತ, ಚೈನಾ, ಜಪಾನ್ ಮುಂತಾದ ಹಲವಾರು ದೇಶಗಳಲ್ಲಿ ಸಾಂಪ್ರದಾಯಿಕ ಚಿಕಿತ್ಸೆಗೆ ಶುಂಠಿಯನ್ನು ಬಳಸುತ್ತಾರೆ. ಶುಂಠಿ, ಹಸಿವೆ ಮತ್ತು ಜೀರ್ಣಶಕ್ತಿಯನ್ನು ಉದ್ದೀಪಿಸುತ್ತದೆ. ವಾಯು, ಹೊಟ್ಟೆಯುಬ್ಬರ, ಗಂಟಲು ನೋವು, ಕೆಮ್ಮು, ಮೂಗು ಕಟ್ಟುವುದು ಮತ್ತು ನೆಗಡಿಯನ್ನು ನಿವಾರಿಸುತ್ತದೆ. ಪ್ರಯಾಣ ಮಾಡುವಾಗ, ಕ್ಯಾನ್ಸರ್ ರೋಗ ನಿವಾರಣೆಗೆ chemotherapy ಪಡೆಯುವಾಗ, ಗರ್ಭಿಣಿಯರಿಗೆ ಉಂಟಾಗುವ ವಾಕರಿಕೆ ಮತ್ತು ವಾಂತಿಯಾಗುವುದನ್ನು ತಡೆಯಲು ಶುಂಠಿ ನೀರು, ಶುಂಠಿ ಟೀ, ಜಿಂಜರ್ ಏಲ್ ಮತ್ತು ಜಿಂಜರ್ ಕ್ಯಾಂಡಿ ಬಹು ಉಪಯುಕ್ತ. ಪ್ರಯಾಣ ಮಾಡುವಾಗ ಉಂಟಾಗುವ ವಾಕರಿಕೆ ಮತ್ತು ವಾಂತಿಯಾಗುವುದನ್ನು ತಡೆಯಲು ಶುಂಠಿ ಫಾರ್ಮಸಿಗಳಲ್ಲಿ ದೊರೆಯುವ prescription ಮಾತ್ರೆಗಳಷ್ಟೇ ಚೆನ್ನಾಗಿ ಕೆಲಸಮಾಡುತ್ತದೆ. ಅಲ್ಲದೆ ಯಾವ ಅಡ್ಡ ಪರಿಣಾಮಗಳೂ (ಜೋಂಪು, ತೂಕಡಿಕೆ) ಇರುವುದಿಲ್ಲವೆಂದು ಕೆಲವು ಅಧ್ಯಯನಗಳಿಂದ ಸಾಬೀತಾಗಿದೆ. ಶುಂಠಿಯ ಬಳಕೆಯಿಂದ ಸಂಧಿವಾತದ (Arthritis) ಮತ್ತು ತೀವ್ರ ತಲೆಶೂಲೆಯ (migraine) ನೋವನ್ನು ಕಡಿಮೆಗೊಳಿಸಬಹುದು; ರಕ್ತ ನಾಳಗಳ ಊತವನ್ನು ತಡೆಯಬಹುದು ಎಂದು ಕೆಲವು ಅಧ್ಯಯನಗಳು ತಿಳಿಸಿವೆ. ಶುಂಠಿಯ ಈ ಗುಣಗಳಿಗೆ ವೈಜ್ಞಾನಿಕ ಕಾರಣಗಳನ್ನು ಅರಿಯಲು ವಿಜ್ಞಾನಿಗಳು ಅನೇಕ ಸಂಶೋಧನೆಗಳನ್ನು, ಅಧ್ಯಯನಗಳನ್ನು ಕೈಕೊಂಡಿದ್ದಾರೆ.

ಶೇಖರಿಸಿಡುವುದು ಹೇಗೆ?

ಹಸಿಶುಂಠಿಯನ್ನು ಮೂರು ವಾರಗಳ ಕಾಲ ರೆಫ್ರಿಜರೇಟರಿನಲ್ಲಿ ಇಡಬಹುದು. ಫ್ರೀಜರಿನಲ್ಲಿ ಆರು ತಿಂಗಳುಗಳ ಕಾಲ ಇಡಬಹುದು. ಫ್ರೀಜರಿನಲ್ಲಿ ಇಡುವುದಾದರೆ ಈ ರೀತಿ ಮಾಡಿ - ಕುದಿಸಿದ ನೀರಿನಲ್ಲಿ ಶುಂಠಿಯನ್ನು ಮುಳುಗಿಸಿ ತಕ್ಷಣ (10 ಸೆಕೆಂಡುಗಳು) ತೆಗೆದುಬಿಡಿ. ಒಂದು ಚೊಕ್ಕಟವಾದ ಬಟ್ಟೆಯಲ್ಲಿ ಒರಸಿ ತೆಳುವಾಗಿ ಹೋಳುಮಾಡಿ, ಚಿಕ್ಕ ಚಿಕ್ಕ ಪ್ಲಾಸ್ಟಿಕ್ ಡಬ್ಬಿಯಲ್ಲಿ ಹಾಕಿ ಫ್ರೀಜರಿನಲ್ಲಿಡಿ. ನಿಮಗೆ ಬೇಕಾದಾಗ ಒಂದೆರಡು ಹೋಳುಗಳನ್ನು ತೆಗೆದು ಉಪಯೋಗಿಸಬಹುದು.

ಪ್ರತಿದಿನ ಶುಂಠಿಯನ್ನು ಬಳಸಲು ಕೆಲವು ಸುಲಭ ವಿಧಾನಗಳು ಈ ಕೆಳಗಿವೆ.

- **ಶುಂಠಿ ನೀರು** - ಹಿಂದಿನ ರಾತ್ರಿ ಒಂದು ಥರ್ಮಾಸ್ ಫ್ಲಾಸ್ಕಿನಲ್ಲಿ ಬಿಸಿ ನೀರು ಮತ್ತು 1 ಸೆಂಟಿಮೀಟರ್ ಜಜ್ಜಿದ ಹಸಿಶುಂಠಿ ಹಾಕಿಡಿ. ಮಾರನೆಯ ದಿನ ಉಪಯೋಗಿಸಿ.
- **ಶುಂಠಿ ಟೀ** - 1 ಲೋಟ ಶೋಧಿಸಿದ ಶುಂಠಿ ನೀರನ್ನು ಬಿಸಿ ಮಾಡಿ, ನಿಮ್ಮ ರುಚಿಗೆ ತಕ್ಕಷ್ಟು ನಿಂಬೆಹುಳಿ, ಸಕ್ಕರೆ/ಜೇನುತುಪ್ಪ ಬೆರೆಸಿ.
- **ಶುಂಠಿ ಪಾನಕ** - 4 ಲೋಟ ನೀರಿಗೆ 1 ಸೆಂಟಿಮೀಟರ್ ಜಜ್ಜಿದ/ತುರಿದ ಹಸಿಶುಂಠಿ ಹಾಕಿ, ಸಣ್ಣ ಉರಿಯಲ್ಲಿ 15 ನಿಮಿಷ ಕುದಿಸಿ, ಶೋಧಿಸಿ, ರೆಫ್ರಿಜರೇಟರ್ ನಲ್ಲಿ ಇಡಿ. ನಿಮ್ಮ ರುಚಿಗೆ ತಕ್ಕಷ್ಟು ನಿಂಬೆಹುಳಿ, ಸಕ್ಕರೆ/ಜೇನುತುಪ್ಪ ಬೆರೆಸಿ.
- **ಮಸಾಲಾ ಟೀ** - 4 ಲೋಟ ನೀರಿಗೆ 2 ಸೆಂಟಿಮೀಟರ್ ಜಜ್ಜಿದ/ತುರಿದ ಹಸಿಶುಂಠಿ, 4 ಏಲಕ್ಕಿ, 4 ಲವಂಗ, ಸಣ್ಣ ಚೂರು ಚಕ್ಕೆ ಹಾಕಿ ಒಂದು ಕುದಿ ಬರಿಸಿ. ಉರಿ ಸಣ್ಣಗೆ ಮಾಡಿ 10 ನಿಮಿಷ ಕುದಿಯಲು ಬಿಡಿ. 4 ಟೀ ಚಮಚ ಟೀ ಪುಡಿ, 2 ಲೋಟ ಕೊಬ್ಬು ರಹಿತ ಹಾಲನ್ನು ಹಾಕಿ 2 ನಿಮಿಷ ಕುದಿಸಿ. ಶೋಧಿಸಿ, ರುಚಿಗೆ ತಕ್ಕಷ್ಟು ಸಕ್ಕರೆ ಬೆರೆಸಿ. ▪

ಆಹಾರವೇ ನಿನಗೆ ಔಷಧಿಯಾಗಲಿ, ಔಷಧಿಯೇ ನಿನ್ನ ಆಹಾರವಾಗಲಿ - ಹಿಪೋಕ್ರಟೀಸ್ *(c. 460 -370 BCE)

ವಿಚಾರ

ವಿಹಾರ

ಮಾಲು, ಅಡಿಲೈಡ್

ಉತ್ಸವೇ ವ್ಯಸನೇ ಚೈವ ದುರ್ಭಿಕ್ಷೆ ಶತ್ರುನಿಗ್ರಹೇ
ರಾಜದ್ವಾರೆ ಸ್ಮಶಾನೆ ಚ ಯಸ್ತಿಷ್ಠತಿ ಸ ಬಾಂಧವಃ

ಈ ಮೇಲಿನ ಶ್ಲೋಕವನ್ನು ಶ್ರೀ ವಿಧ್ವಾನ್ ಕೆ.ಜಿ. ಸುಬ್ರಾಯಶರ್ಮರವರ 'ಸುಭಾಷಿತ ಸಂವತ್ಸರ' ದಿಂದ ಆಯ್ದದ್ದು. ಮೇಲಿನ ಶ್ಲೋಕದ ಅರ್ಥ?

- ಸುಖ:ದಲ್ಲಿ, ದುಖ:ದಲ್ಲಿ, ಆರ್ಥಿಕ ಮುಗ್ಗಟ್ಟಿನಲ್ಲಿ, ಸನ್ಮಾನಕ್ಕೆ ಒಳಪಡುವ ಸಮಯದಲ್ಲಿ, ದುಷ್ಟ ಜನರಿಂದ ತೊಂದರೆ ಅನುಭವಿಸುತ್ತಿರುವ ವೇಳೆಯಲ್ಲಿ ಮತ್ತು ಅಂತ್ಯದ ಸಮಯದಲ್ಲಿ ಪ್ರತ್ಯಕ್ಷನಾಗುವವನೆ ನಿಜವಾದ ಬಂಧು ಅಥವಾ ಮಿತ್ರ.

ಮಿತ್ರತ್ವ

ಮನುಷ್ಯ ಸಂಘ ಜೀವಿ. ಒಬ್ಬ ಮನುಷ್ಯ ಜೀವಿಗೆ ಇನ್ನೊಬ್ಬ ಮನುಷ್ಯ ಜೀವಿಯ ಹಂಗು ಅನಿವಾರ್ಯ. ಸ್ನೇಹದ ಆಕಾಂಕ್ಷೆ, ಸ್ನೇಹಿತರಿಂದ ನಿರೀಕ್ಷೆ ಮತ್ತು ಸ್ನೇಹತ್ವವನ್ನು ತೋರುವ ಅಪೇಕ್ಷೆ ಮನುಜನಲ್ಲಿ ಸ್ವಾಭಾವಿಕ.

ಶ್ರೀ ಕೃಷ್ಣ ಅರ್ಜುನನಿಗೆ ಬಂಧುವಷ್ಟೇ ಆಗಿರದೆ ಸ್ನೇಹಿತನೂ ಆಗಿದ್ದ. ಅವನಿಗೆ ಯುದ್ಧದ ಸಮಯದಲ್ಲಿ ಮಾನಸಿಕ ಗೊಂದಲ ಉಂಟಾದಾಗ ಅವನ 'ಮೋಹ ನಷ್ಟ'ವಾಗಿಸಿ 'ಸ್ಮೃತಿ ಲಬ್ಧ'ತೆ ಯನ್ನು ಗೀತೆಯ ಮೂಲಕ ಕೊಟ್ಟು ಅವನ ದುಗುಡವನ್ನು ನಿವಾರಿಸಿದ.

'ಅಭಿಮಾನಧನ' ಎನಿಸಿದ ದುರ್ಯೋಧನನ ಆಪ್ತ ಕರ್ಣ. ಸ್ನೇಹಪರತೆಗೆ ಕರ್ಣ ಇನ್ನೊಂದು ಹೆಸರು. ಆ ಐವರು ಪಾಂಡವರು ಅವನ ಸಹೋದರರು ಎಂದು ತಿಳಿದ ನಂತರವೂ ವಿಚಲಿತನಾಗದೆ, ದುರ್ಯೋಧನನ ಸ್ನೇಹಿತನಾಗಿ ಉಳಿದು, ಅವನ ಸೇನೆಯಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದ.



ಶ್ರೀ ಕೃಷ್ಣ ಮತ್ತು ಸುಧಾಮರ ಕಥೆ ಕೇಳದವರಿಲ್ಲ. ಕಡು ಬಡತನದ ಕಷ್ಟಕಾರ್ಪಣ್ಯವನ್ನು ತಾಳಲಾರದೆ ಸುಧಾಮ ತನ್ನ ಬಾಲ್ಯ ಸ್ನೇಹಿತನಾದ ಕೃಷ್ಣನನ್ನು ಕಾಣಲು ಹೋದ. ಕೃಷ್ಣನು ಆದರದಿಂದ ಸುಧಾಮನು ಪ್ರೀತಿಯಿಂದ ಕೊಟ್ಟ ಒಂದು ಹಿಡಿ ಅವಲಕ್ಕಿಯನ್ನು ಸ್ವೀಕರಿಸಿ ಅವನ ಸ್ನೇಹಿತನಾದ ಸುಧಾಮನಿಗೆ ಸಕಲ ಸಂಪತ್ತನ್ನು ದಯಪಾಲಿಸಿದ.

ಸ್ನೇಹಪರತೆಗೆ ಮತ್ತೊಂದು ಉದಾಹರಣೆ ಶ್ರೀ ರಾಮ ಮತ್ತು ಸುಗ್ರೀವ. ಉಪದ್ರವ ಕೊಡುತ್ತಿದ್ದ ಸುಗ್ರೀವನ ಅಣ್ಣನಾದ ವಾಲಿಯನ್ನು ಮಾತು ಕೊಟ್ಟಂತೆ ಶ್ರೀ ರಾಮ ಅವನನ್ನು ವಧೆಮಾಡಿದ. ಅದಕ್ಕೆ ಪ್ರತ್ಯುಪಕಾರವಾಗಿ ಸುಗ್ರೀವನು ಸೀತಾನ್ವೇಷಣೆಗೆ ಶ್ರೀ ರಾಮನಿಗೆ ಸಹಾಯ ಹಸ್ತ ನೀಡಿದ.

ಮೇಲೆ ಹೇಳಿರುವ ಎಲ್ಲ ದೃಷ್ಟಾಂತಗಳು ಸ್ನೇಹತ್ವಕ್ಕೆ ಚಾರಿತ್ರಿಕ ಸಾಕ್ಷ್ಯ.

'A friend is someone who knows all about you and still loves you' ಎಂಬ ಉಕ್ತಿಯಲ್ಲಿನ ಸ್ನೇಹಿತ ಯಾ ಸ್ನೇಹಿತೆ ಸಕಲರಿಗೂ ಸಿಕ್ಕಲ್ಲಿ ಅವರು ಧನ್ಯರಲ್ಲದೆ ಮತ್ತೇನು. ▪

ಚಿಲುಮೆಯ ಎಲ್ಲಾ ಸಂಚಿಕೆಗಳೂ ಸೇರಿದಂತೆ ಕಥೆ, ಕವನ, ಹಾಸ್ಯ, ಆರೋಗ್ಯ ... ಇನ್ನಿತರ ಸಾಹಿತ್ಯಕ್ಕೆ ಭೇಟಿಕೊಡಿ
HTTP://WWW.SUGAMAKANNADA.COM/

ರಾಂ ರಾಮ

ಇದು ಹಾಸ್ಯ ಪುಟ

ಶ್ರೀ ರಾಮನಾಥ್ ಅವರು ಉತ್ತರಿಸುವ "ನೀವು ಕೇಳಿದಿರಿ" ಬ್ಲಾಗ್‌ನಲ್ಲಿ ಲಭ್ಯ. ಕೆಳಗಿನ ಲಿಂಕ್ ಕ್ಲಿಕ್ ಮಾಡಿ

ನೀವು ಕೇಳಿದಿರಿ

ರಾಮನಾಥ್
ಭಾಷಣಕಾರರು, ಹಾಸ್ಯ ಲೇಖಕರು

ಅಯ್ಯಯ್ಯೋ ಸೀನು... ಸೀನು!!!

"ನಮಸ್ಕಾರ ಸಾ"

ಬಂತು ಗ್ರಹಚಾರ! ಎಲ್ಲರಿಗೂ ಅಲರ್ಜಿ ಬಂದರೆ ಸೀನು.

ನನಗೆ ಈ ಸೀನು ಬಂದರೆ ಅಲರ್ಜಿ.

ಸೀನು ಉರುಫ್ ಸೀನ ಉರುಫ್ ಶ್ರೀನಿವಾಸನ್ ತರಗತಿಯಲ್ಲಿ ತರತರಹದ ಗತಿಯಲ್ಲಿ ತರಳೆ ಎಬ್ಬಿಸುವವನು.

"ಪಾಸ್ ಆಗಲ್ವೇನೋ ಸೀನು? ಇದು ಆರನೇ ವರ್ಷವಲ್ಲೋ ಎಂಟನೇ ಕ್ಲಾಸಲ್ಲಿ?"

"ನಾನೂ ಒಂಥರಾ ಬೆಂಗಳೂರಿನ ಏರಿಯಾ ಇದ್ದಂಗೆ ಸಾ"

"ಏನೋ ಹಾಗಂದ್ರೆ?"

"ಬನಶಂಕರಿ ಆರನೇ ಹಂತ, ಹತ್ತನೇ ಬ್ಲಾಕ್ ಅಂತೆಲ್ಲಾ ಇರತ್ತಲ್ಲಾ ಸಾ, ಹಾಗೇ ನನ್ನದೂ ಎಂಟನೇ ಕ್ಲಾಸ್ ಆರನೇ ಹಂತ"

"ಮೂದೇವಿ. ಮಾತಿನಲ್ಲಿರೋ ಜಾಣತನಾನ ಓದಿನಲ್ಲಿ ತೋರಿಸಿ ಪಾಸಾಗಬಾರದೇನೋ?"

"ಪಾಸಾದ್ರೆ ಏನು ಪ್ರಯೋಜ್ನ ಸಾ?"

"ಒಳ್ಳೇ ಕೆಲಸಕ್ಕೆ ಸೇರಿ, ಒಳ್ಳೇ ದುಡ್ಡು ಸಂಪಾದ್ಸಿ, ಹೆಂಡತಿ ಮಕ್ಕಳ ಜೊತೆ ಝುಂ ಅಂತ ಇರಬಹುದಲ್ಲೋ?"

"ನೀವಿದ್ದೀರಾ ಸಾ?"

ಇದೇ ಇವನ ಎಡವಟ್ಟು. "ಇದ್ದೀನಿ" ಎಂದರೆ ಕಂತೆ ಬಿಚ್ಚಿ ಮಾನ ತೆಗೆಯುತ್ತಾನೆ. "ಇಲ್ಲ" ಎಂದರೆ "ಅದ್ಕೇ ಸಾ ಓದ್ನಿಂದ ಏನೇನೂ ಪ್ರವೇಜ್ನ ಅಲ್ಲಾನ್ನೋದು" ಅಂತಾನೆ!

"ನನ್ವಿಷ್ಯ ಬಿಡು. ನೀನು..."

"ನಮ್ಮತ್ತೆ ಮಗಳು ಗೊತ್ತಾಗವ್ಳೆ ಸಾ. ಮುಂದಿನೊರ್ಸ ಲಗ್ನ"

"ಕ್ಲಾಸು... ಪಾಸು..."

"ಮನೇನಾಗೆ ಬೇಜಾರಾದಾಗೆಲ್ಲ ಸ್ಕೂಲ್‌ಗೆ ಬರ್ತೀನಿ ಸಾ"

ಸೀನು ಬುದ್ಧಿವಂತನಲ್ಲ ನಿಜ. ಆದರೆ ಪೆದ್ದ ಎಂದೂ ವರ್ಗೀಕರಿಸಲಾಗದು.

"ಅಮೆರಿಕಾ ಕಂಡುಹಿಡಿದವರು ಯಾರೋ ಸೀನು?"

"ಯಾಕ್ಸಾ? ಅದು ತಪ್ಪಿಸ್ಕೊಂಡಿತ್ತಾ?"

"ಕೇಳಿದ್ದಕ್ಕೆ ಉತ್ತರ ಕೊಡೋ ತರಳೆ"

"ಅದ್ಯಾರೋ ಪಶ್ಚಿಮ ಬಂಗಾಳದ ಕಡೆಯವನು ಸಾ"

"ದಡ್ಡ. ಅಮೆರಿಕ ಕಂಡುಹಿಡಿದವನು ಕೊಲಂಬಸ್ ಕಣೋ"

"ಅದೇ ನಾನೂ ಹೇಳಿದ್ದು. ಜ್ಯೋತಿ ಬಸು ಚೆಕ್ಕ ತಾತನ ಚೆಕ್ಕಪ್ಪ ಅಲ್ವಾ ಸಾರ್ ಕೊಲಂ ಬಸು? ಕೊಲಂ ಅಂದ್ರೆ ಕೋಲ್ಕತ್ತಾ ಷಾರ್ಟ್ ಫಾರಂ ಸಾ"

ಹಿಂದೊಮ್ಮೆ, ಸೀನು ಎಂಟನೆಯ ಕ್ಲಾಸಿನ ಎರಡನೆಯ ವರ್ಷದಲ್ಲಿ ಇದ್ದಾಗ (ಆಗಲೇ ಅವನಿಗೆ 17 ವರ್ಷ) ಒಂದು ಲೆಕ್ಕ ಹಾಕಿಕೊಟ್ಟಿದ್ದೆ.

'ವಿಜಯನು ತನ್ನ ಖಾತೆಯಲ್ಲಿ 1500 ರೂಗಳನ್ನು ಜಮಾ ಮಾಡಿರುತ್ತಾನೆ. ಸಾಲಿಯಾನ 10 ಪ್ರತಿಶತ ಸರಳಬಡ್ಡಿಯಂತೆ ಅವನ ಹಣ ಎರಡು ವರ್ಷಗಳಲ್ಲಿ ಎಷ್ಟಾಗುತ್ತದೆ?' – ಇಷ್ಟೇ ಲೆಕ್ಕ.

ಲೆಕ್ಕ ಕೊಟ್ಟು ಮೂರು ಪೀರಿಯಡ್ ಆದರೂ ಸೀನು ಇನ್ನೂ ಅದೇನೋ ಮೀನಮೇಷ ಎಣಿಸುತ್ತಲೇ ಇದ್ದ.

"ಆಯ್ತೇನೋ ಸೀನು ಲೆಕ್ಕ?"

"ಎಲ್ಲಾನಾ ಉಂಟೇ ಸಾ"

"ಯಾಕೋ?"

"ವಿಷಯ ಕೊಂಚ ಬಿಡಿಸಿ ಹೇಳಿದ್ರೆ ಗೊತ್ತಾಗತ್ತೆ ಸಾ"

"ಏನು ಹೇಳಬೇಕೋ?"

"ಅದು ನ್ಯಾಷನಲೇಸ್ಡ್ ಬ್ಯಾಂಕೋ, ಕೋ-ಆಪರೇಟಿವ್ ಬ್ಯಾಂಕೋ ಸಾ?"

(ಮುಂದಿನ ಪುಟ ನೋಡಿ...)

“ಯಾವುದಾದರೆ ಏನೋ?”

“ಕೋ-ಆಪರೇಟಿವ್ ಬ್ಯಾಂಕ್ ಆದ್ರೆ ಬ್ಯಾಂಕೇ ಗ್ಯಾರಂಟಿ ಇಲ್ಲ; ಇನ್ನು ಅಸಲು, ಬಡ್ಡಿ ಲೆಕ್ಕ ಹಾಕಿ ಏನು ಪ್ರವೇಜ್ನ ಸಾ”

“ಸರಿ. ನ್ಯಾಷನಲೈಸ್ಡ್ ಬ್ಯಾಂಕ್ ಅಂತಾನೇ ಇಟ್ಕೋ”

“ಈ ವಿಜಯ ಎಂಥ ಮನುಷ್ಯ ಸಾ?”

“ಮನುಷ್ಯ ಯಾರಾದ್ರೂ ಬಡ್ಡಿ ಒಂದೇ ಅಲ್ವೇನೋ?”

“ಬಡ್ಡಿ ಒಂದೇ ಇರಬಹುದು ಸಾ. ಆದ್ರೆ ಲೆಕ್ಕ ಅಂದ್ರೆ ಅಷ್ಟೇ ಅಲ್ವಲ್ಲಾ ಸಾ”

“ಇನ್ನೇನೋ?”

“ಅವನ ಟ್ರಾನ್ಸಾಕ್ಷನ್ ಜಾಸ್ತಿ ಇತ್ತಾ ಸಾ?”

“ಯಾಕೋ?”

“ಇದ್ರೆ ಚೆಕ್‌ಬುಕ್ ತೊಗೋತಾನೆ. ಒಂದು ಚೆಕ್‌ಬುಕ್‌ಗೆ ಇಷ್ಟು ಅಂತ ಹಣ ಹಿಡೀತಾರೆ ಸಾ ಬ್ಯಾಂಕೋವ್ರು. ಅದನ್ನ ಕಳೀಬೇಕಲ್ಲವ್ರಾ?”

“ಇಲ್ಲ; ಚೆಕ್‌ಬುಕ್ ತೊಗೊಂಡಿಲ್ಲ. ಈಗ ಹೇಳು ಉತ್ತರ”

“ಅವನ ಫ್ರೆಂಡ್ಸ್ ಹೇಗೆ ಸಾ?”

“ಅದಕ್ಕೂ ಇದಕ್ಕೂ ಏನೋ ಸಂಬಂಧ?”

“ಅವರೇನಾದ್ರಾ ಇವನಿಗೆ ಬೌನ್ಸ್ ಆಗೋ ಚೆಕ್ ಕೊಟ್ಟಿದ್ರೆ ಅಕೌಂಟಿಂದ ದುಡ್ಡು ಮೈನಸ್ ಆಗತ್ತೆ ಸಾ”

“ಇಲ್ಲ; ಅಂತಹ ಫ್ರೆಂಡ್ಸ್ ಯಾರೂ ಅವನಿಗೆ ಇಲ್ಲ”

“ಅದು ಸಿಂಗಲ್ ಅಕೌಂಟೋ, ಜಾಯಿಂಟ್ ಅಕೌಂಟೋ ಸಾ?”

“ಯಾವುದಾದರೆ ಏನೋ?”

“ಜಾಯಿಂಟ್ ಅಕೌಂಟ್ ಆದ್ರೆ ಇವನಿಗೆ ಗೊತ್ತಿಲ್ದೆ ವಿತ್‌ಡ್ರಾ ಮಾಡ್ಬಿಟ್ಟಿದ್ರೆ ಲೆಕ್ಕ ಎಡವಟ್ಟಾಗತ್ತೆ ಸಾ”

“ಸಿಂಗಲ್ ಅಕೌಂಟೇ ಕಣೋ”

“ಈ 1500 ಮಿನಿಮಮ್ ಬ್ಯಾಲೆನ್ಸ್ ಸೇರೋ, ಬಿಟ್ಬೋ ಸಾ?

“ಬ್ಯಾಂಕಲ್ಲಿ ಇಟ್ಟೇ ಇಲ್ಲ ಅಂದ್ಮೊಳೋ ಸೀನು. ತನ್ನ ಫ್ರೆಂಡ್‌ಗೆ ಸಾಲ ಕೊಟ್ಟ ಅಂತಿಟ್ಕೊ. ಈಗ ಉತ್ತರ ಹೇಳು”

“ಗರ್ಲ್‌ಫ್ರೆಂಡೋ, ಬಾಯ್‌ಫ್ರೆಂಡೋ ಸಾ?”

“ಯಾರಾದ್ರೆ ಏನೋ?”

“ಗರ್ಲ್‌ಫ್ರೆಂಡ್ ಆದ್ರೆ ಬಡ್ಡಿ ಇರಲಿ, ಅಸಲೂ ಕೇಳಕ್ಕಾಗಲ್ಲ ಸಾ. ಪ್ರೆಸ್ಟೀಜ್ ಪ್ರಶ್ನೆ!”

“ಬಾಯ್‌ಫ್ರೆಂಡ್ ಅಂತಾನೇ ಇಟ್ಕೊಳೋ”

“ಫ್ರೆಂಡು ಒಳ್ಳೆಯವನೋ, ರೌಡೀನೋ ಸಾರ್?”

ಸೀನುವನ್ನು ಲೆಕ್ಕದ ಪ್ರಶ್ನೆ ಕೇಳಿದ್ದು ಅದೇ ಕೊನೆ.

ಅವನ ಇಂಗ್ಲಿಷ್ ಸಹ ಅಸಾಧಾರಣವಾದುದೇ. ಅವರ ಇಂಗ್ಲಿಷ್ ಟೀಚರ್ ಸಹ ಅವನನ್ನು ಕೇಳಿದ್ದು ಎರಡೇ ಪ್ರಶ್ನೆಗಳು!

“ಪ್ರಿಪೋಸಿಷನ್ ಅಂದ್ರೆ ಏನೋ?”

“ಮೊನ್ನೆ ಅಚಾರ್ ಸಾ ಸೂಸನ್ ಮಿಸ್‌ಗೆ ಮಾಡ್ತಿದ್ರು ಸಾ”

“ಏನು ಮಾಡ್ತಿದ್ರೋ?”

“ನೀವ್ಹೇಳಿದ್ದೇ ಸಾ. ಮಂಡಿಯೂರಿ ಕೂತು, ರೋಜ ಹೂವನ್ನ ಸೂಸನ್ ಮಿಸ್‌ಗೆ ಕೊಟ್ರು ಸಾ”

“ಮೂರ್ಖ. ಅದು ಪ್ರೊಪೋಸ್ ಮಾಡೋದು ಕಣೋ. ಪ್ರಿಪೋಸಿಷನ್ ಅಲ್ಲ”

“ಯಾವ್ದೋ ಒಂದು ಪೊಸಿಷನ್ ಬಿಡಿ ಸಾ. ಈ ಪೊಸಿಷನ್‌ಗಿಂತ ಆ ಪೋಸೇ ವಾಸಿ”

“ಹೋಗಲಿ, ಕಂಜಂಕ್ಷನ್ ಅಂದ್ರೆ ಏನೋ?”

“ಮೂಗಿನ ಮೇಲ್ಭಾಗ ಸಾ”

“ವಾಟ್ ನಾನ್ಸೆನ್ಸ್”

“ನೀವೇ ನೋಡಿ ಸಾ. ಎರಡೂ ಕಣ್ಣು ಸೇರೋ ಜಂಕ್ಷನ್ನೇ ಕಂಜಂಕ್ಷನ್ನು ಸಾ”

ರಸಾಯನಶಾಸ್ತ್ರದ ಅಧ್ಯಾಪಕರ ಅನುಭವವೂ ಇದಕ್ಕಿಂತ ಭಿನ್ನವೇನಿಲ್ಲ.

“ಆಮ್ಲಜನಕ, ಜಲಜನಕ, ಸಾರಜನಕಗಳು ಗೊತ್ತೇನೋ?” (ಮುಂದಿನ ಪುಟ ನೋಡಿ...)

"ಗೊತ್ತು ಸಾರ್. ಆಮ್ಲಜನಕ ಅಪ್ಪ, ಜಲಜನಕ ಅಮ್ಮ"

"ಮುಟ್ಠಾಳ; ಸಾರಜನಕ?"

"ಮಾವ ಸಾರ್. ನನ್ನ ಸಂಸಾರಕ್ಕೆ ಸಾರ ತುಂಬುವವಳನ್ನು ನೀಡುವವನೇ ಸಾರಜನಕ ಸಾ"

ಸೀನು ಇಡೀ ಅಧ್ಯಾಪಕವೃಂದಕ್ಕೆ ಸಿಂಹಸ್ವಪ್ನ. ಒಮ್ಮೆ ಬಯಾಲಜಿ ಟೀಚರ್ "ಪಾಚಿ ಎಂದರೇನು?" ಎಂದು ಕೇಳಿದಾಗ ಎರಡೂ ಕೈಗಳನ್ನು ಜೋಡಿಸಿ, ಬಲಗೆನ್ನೆಯ ಮೇಲೆ ಇರಿಸಿಕೊಂಡು, ನಿಧಾನವಾಗಿ ಪಕ್ಕಕ್ಕೆ ತಿರುಗಿ, ಹಾಗೆಯೇ ಮಲಗಿ "ಇದೇ ಸಾ ಪಾಚಿ ಅನ್ನೋದು. ನಮ್ಮಮ್ಮ ನನ್ನನ್ನ ಮಲಗಿಸಕ್ಕೆ 'ಪಾಚಿ ಚೀನೂ' ಅನ್ನೋವ್ಳು. ನಾನು ಹೀಗೆ ಮಾಡ್ತಿದ್ದೆ" ಎಂದಿದ್ದನ್ನು ನೆನೆಸಿ ನೆನೆಸಿಕೊಂಡು ತಿಂಗಳುಗಟ್ಟಲೆ ಅರ್ಧರಾತ್ರಿಯಲ್ಲಿಯೂ ಬೆಚ್ಚಿಬಿದ್ದು ಏಳುತ್ತಿದ್ದರು.

ಅದೆಲ್ಲಾ ಹತ್ತು ವರ್ಷಗಳ ಹಿಂದಿನ ಮಾತು. ಮೊನ್ನೆ ಸೀನು ರೋಡಗಲ ಕಾರಿನ ಹಿಂದಿನ ಸೀಟಿನಲ್ಲಿ ಕುಳಿತಿದ್ದ. ಅಲ್ಲಿಂದಲೇ 'ನಮಸ್ಕಾರ ಸಾ' ಎಂದ.

"ಏನ್ಮಾಡ್ಕೊಂಡಿದ್ದೀಯೋ ಸೀನು?"

"ನಮ್ಮ ಮಾವ ಎಂಪಿ ಸಾ"

"ನೀನು?"

"ಎಜುಕೇಸನ್ ಬೋಲ್ಡ್ ಪೆಸಿಡೆಂಟ್"

ನಾನು ನಿಂತಲ್ಲೇ ಕುಸಿದುಬಿದ್ದೆ. ▪

(ಕೃಪೆ: ಸೆಪ್ಟೆಂಬರ್ ಮೊದಲ ವಾರದ ಸುಧಾ ವಾರಪತ್ರಿಕೆ.)

ಕನ್ನಡದಲ್ಲಿ ಟೈಪ್ ಮಾಡೋದು ಹೇಗೆ

ಹೊರನಾಡ ಚಿಲುಮೆ - ಸೆಪ್ಟೆಂಬರ್ ಸಂಚಿಕೆಯಲ್ಲಿ google input tools ಉಪಯೋಗಿಸಿ ಕನ್ನಡದಲ್ಲಿ ಹೇಗೆ ಟೈಪ್ ಮಾಡಬಹುದು ಎಂದು ತಿಳಿದು ಕೊಂಡಿರಿ.

ಪೂರ್ಣ ಮಾಹಿತಿಗೆ ಸೆಪ್ಟೆಂಬರ್ ಸಂಚಿಕೆಯನ್ನು ನೋಡಲು ಈ ಲಿಂಕ್ ಕ್ಲಿಕ್ ಮಾಡಿ.

ಸಂಕ್ಷಿಪ್ತ ಮಾಹಿತಿ ಇಲ್ಲಿದೆ

ಗೂಗಲ್ ಇನ್ಪುಟ್ ಟೂಲ್ಸ್ (Google input tools) ಯೂನಿಕೋಡ್ ಆಧಾರಿತ ಒಂದ ತಂತ್ರಾಂಶ. ಇದನ್ನು ನಿಮ್ಮ ಕಂಪ್ಯೂಟರ್ ನಲ್ಲಿ install ಮಾಡಿದರೆ ಕನ್ನಡದಲ್ಲಿ ನೀವು ನೇರವಾಗಿ word, excel ಇತ್ಯಾದಿ office ಸಾಫ್ಟ್ವೇರ್ ಅಲ್ಲದೆ, ಸಮಾಜ ತಾಣಗಳಾದ ಫೇಸ್ಬುಕ್ , ಜಿ-ಪ್ಲಸ್ ಇತ್ಯಾದಿಗಳಲ್ಲೂ ಟೈಪ್ ಮಾಡಬಹುದು.

INSTALL ಮಾಡುವ ಮತ್ತು ಉಪಯೋಗಿಸುವ ವಿಧಾನ

1. http://www.google.com/inputtools/windows/index.html - ಈ ಲಿಂಕ್ ಕ್ಲಿಕ್ ಮಾಡಿ

   ಇರುವ ಹಲವಾರು ಭಾಷೆಗಳ ಲಿಸ್ಟ್ ನಲ್ಲಿ ಕನ್ನಡ ಕ್ಲಿಕ್ ಮಾಡಿ install ಮಾಡಿ.

   ಆಂಗ್ಲ ಭಾಷೆಯಲ್ಲಿ ಟೈಪ್ ಮಾಡುತ್ತಿದ್ದಾಗ ಕನ್ನಡ ಟೈಪ್ ಮಾಡಲು ಒಟ್ಟಿಗೆ CTRL + G ಕೀ ಒತ್ತಿ. ಆಗ ಆಂಗ್ಲದಿಂದ ಕನ್ನಡಕ್ಕೆ ಕೀಲಿಮಣೆ ಸಿದ್ಧವಾಗುತ್ತದೆ. ನಂತರ ನೀವು ಮತ್ತೆ ಆಂಗ್ಲ ಪದ ಬಳಸಬೇಕಾದರೆ ಮತ್ತೆ CTRL + G ಕೀ ಒಟ್ಟಿಗೆ ಒತ್ತಿ.

ಸೂಚನೆ: ಕೆಲವೊಮ್ಮೆ ಈ ಬಾಕ್ಸ್ ಕಾಣಿಸದಿದ್ದರೆ ಒಟ್ಟಿಗೆ ALT + SHIFT ಕೀ ಒತ್ತಿ

ನೀವೂ ಜಾಹೀರಾತು ನೀಡಲು ಬಯಸುವಿರಾದರೆ ನಮಗೆ ಇ-ಮೇಲ್ ಮಾಡಿ: horanadachilume@gmail.com

Contact Mr Sudheendra Rao EMAIL
Mobile 0415 291 723

Contact Mr.Sathya Bhat EMAIL
Mobile 0412 918 511

Contact Mr Umesh EMAIL
Mobile 0401 034 456

Contact Mr Eranna Gotyal EMAIL
Mobile 0404 215 605

ಕಥಾ ಚೆಲುಮೆ

ಲೋಕದ ಡೊಂಕು

ಕನಕಾಪುರ ನಾರಾಯಣ

ಒಬ್ಬ ರಾಜನು ದೊಡ್ಡದಾದ ತನ್ನ ಸಾಮ್ರಾಜ್ಯವನ್ನು ನೋಡಲು ರಥವನ್ನೇರಿ ಹೊರಟ. ಊರುಗಳೆಲ್ಲಾ ಸುತ್ತಿ ಬಂದ ನಂತರ ಸಭೆ ಕರೆದ "ರಾಜ್ಯದ ಹಾದಿ ಬಹು ಕೆಟ್ಟದಾಗಿದೆ ಅಲ್ಲಿ ನನಗೆ ನಡೆಯಲು ಸಾಧ್ಯವಿಲ್ಲ, ಅದಕ್ಕಾಗಿ ಎಲ್ಲಾ ರಸ್ತೆಗೂ ಚರ್ಮದ ಕಂಬಳಿ ಹಾಸಿಬಿಡಿ"ಎಂದು ಆಜ್ಞೆ ಮಾಡಿದ. ಅಷ್ಟು ದೊಡ್ಡ ಊರಿನ ಎಲ್ಲಾ ದಾರಿಗೂ ಚರ್ಮವನ್ನು ಒದಗಿಸಲು ಅದೆಷ್ಟು ಪ್ರಾಣಿಗಳು ಬೇಕು? ಅವುಗಳ ಹತ್ಯೆ ಆಗಬೇಕು? ಎಂದು ಜಾಣತನದಿಂದ ಚಿಂತಿಸಿದ ಬುದ್ಧಿವಂತಮ ಮಂತ್ರಿಯು "ಸ್ವಾಮೀ ತಾವೇ ಏಕೆ ಒಂದು ಮೆತ್ತನೆಯ ಚರ್ಮದ ಪಾದರಕ್ಷೆಯನ್ನು ಮಾಡಿಸಿಕೊಳ್ಳಬಾರದು?"ಎಂದು ಕೇಳಿದ. ಅವನ ಸಲಹೆ ಎಲ್ಲರಿಗೂ ಹಿಡಿಸಿತು. ರಾಜನೂ ಒಪ್ಪಿದ. ಮೆಚ್ಚಿ ಉಡುಗೊರೆಯಿತ್ತ.

ನೀತಿ: ಪ್ರಪಂಚವನ್ನು ಬದಲಾಯಿಸುವ ಮೊದಲು ನಮ್ಮನ್ನು ನಾವೇ ಏಕೆ ಬದಲಾಯಿಸಿಕೊಳ್ಳಬಾರದು? ▪

ಬ್ಲಾಗ್ ಲೋಕ

ಓದಲು ಚಿತ್ರದ ಕೆಳಗಿರುವ ಲಿಂಕ್ ಕ್ಲಿಕ್ ಮಾಡಿ

ಕನಕಾಪುರ ನಾರಾಯಣ
ಇವರ "ಚಕ್ಕೆ ಮೊಗ್ಗು"

ಸುದರ್ಶನ್. ಏನ್
ಇವರ "ಅನಿವಾಸಿ"



ಬದರಿ ತ್ಯಾಮಗೊಂಡ್ಲು
ಇವರ "ಕಾವ್ಯ ಕಸ್ತೂರಿ"

ಸ್ಮಿತಾ ಮೇಲ್ಕೋಟೆ
ಇವರ "ಮಂದಹಾಸ"

ಬಾಳೇ ಹಣ್ಣಿನ ಹಲ್ವ

ಬೇಕಾಗುವ ಸಾಮಗ್ರಿಗಳು

- 10-12 ಬಾಳೇಹಣ್ಣು
- ಒಂದು ಬಟ್ಟಲು ಶುದ್ಧ ತುಪ್ಪ
- ಟೀ ಚಮಚ ಏಲಕ್ಕಿ ಪುಡಿ
- ಅರ್ಧ ತೆಂಗಿನ ಕಾಯಿ
- ಒಂದು ಬಟ್ಟಲು ಸಕ್ಕರೆ

ಮಾಡುವ ವಿಧಾನ

- ಬಾಳೇಹಣ್ಣು ಸಿಪ್ಪೆ ಸುಲಿದು ಚೆನ್ನಾಗಿ ಹಿಸುಕಿರಿ
- ಬಾಣಲೆಯಲ್ಲಿ 3 ಚಮಚ ತುಪ್ಪ ಕಾಯಿಸಿ ಬಾಳೆಹಣ್ಣನ್ನು ಹಾಕಿ ಗರಿಗರಿಯಾಗುವ ವರೆಗೂ ಬೇಯಿಸಿ
- ತೆಂಗಿನ ಕಾಯಿತುರಿ, ಸಕ್ಕರೆ ಸೇರಿಸಿ, ತುಪ್ಪವನ್ನು ಸ್ವಲ್ಪಸ್ವಲ್ಪವಾಗಿ ಸೇರಿಸಿ
- ಎಲ್ಲವನ್ನೂ ಕಂದು ಬಣ್ಣ ಬರುವವರೆಗೂ ತಿರುವುತ್ತಿದ್ದು ಸುವಾಸನೆ ಬಂದಮೇಲೆ ಏಲಕ್ಕಿಪುಡಿ ಸೇರಿಸಿ ಒಲೆ ಆರಿಸಿ
- ಬಿಸಿ ಇರುವಾಗಲೇ ತಿನ್ನಲು ಕೊಡಿ

ಇನ್ನೂ ನೂರಾರು ರೆಸಿಪ್ಪಿಗಳಿಗೆ **www.sugamakannada.com** ಗೆ ಭೇಟಿಕೊಡಿ.

ರೆಸಿಪಿ ಕೊಡ್ತೀರಾ!

ಇದೇನ್ಲಾ ಇದು

೧. ಕತ್ತಲಲ್ಲಿ ಬಿದ್ದ ಕಂಬಿ ನನ್ನಿಂದ-ನಿನ್ನಿಂದ,ನಮ್ಮಪ್ಪ-ನಿಮ್ಮಪ್ಪನಿಂದಲೂ ಎತ್ತಕ್ಕಾಗಲ್ಲ
೨. ಅವ್ವ ಅಂದ್ರೆ ತೆರೆಯುತ್ತೆ, ಅಪ್ಪ ಅಂದ್ರೆ ಮುಚ್ಚತ್ತೆ

ಉತ್ತರಕ್ಕೆ ಪುಟ ೧೨ ನೋಡಿ

ಅಳಲು ಇಹುದು ನನ್ನಲಿ...

ಇನಿಯನಿಲ್ಲದ ಮೂಕವೇದನೆ
ಬಿಡದೆ ಎದೆಯನು ಕಾಡಿದೆ
ಸನಿಹವಿರುವ ಮುರುಕು ವೀಣೆಗೆ
ಮರುಕ ಮಿಡಿಸುವ ಹಾಡಿದೆ

ಮುನಿದು ಹೋದವ ನನ್ನ ಇನಿಯನು
ಮೆರೆದು ಹೋದನೆ ಬಾಳಲಿ
ಸುರಿದ ಪ್ರೀತಿಯ ಮುರಿದು ಹೋದನೆ
ಬೆರೆಸಿ ಕಹಿಯನು ಹಾಲಲಿ

ಹೊಂಚಿ ಹಾಕುವ ಅವಳ ಸಂಚಿಗೆ
ಹಂಚಿಕೊಂಡನೆ ತನುವನು
ಮಂಚ ಸೇರಿದ ಅವಳನೆಂದಿಗು
ಕೊಂಚವೂ ನಾ ಸಹಿಸೆನು

ಕಾಡಿ ಬೇಡಿದ, ಕರೆದ ಊರಿಗೆ
ಬರೆನು ಎಂದೂ ಹೇಳಿದೆ
ಹಾಳು ಸುರಿದಿದೆ ಬೆರೆತ ಸೂರಿಗೆ
ಬಾಳು ಬರಿ ಗೋಳಾಗಿದೆ

ರಚನೆ: ಮಾಲು (ಅಡಿಲೈಡ್)

ಹಾಸ್ಯ ಚಿಲುಮೆ

ಡಾಕ್ಟರ್: ನೋಡು ತಿಮ್ಮ ನಿನಗೆ ಎರಡು ನ್ಯೂಸ್ ಇದೆ, ಒಂದು ಗುಡ್ ನ್ಯೂಸ್ ಮತ್ತೊಂದು ಬ್ಯಾಡ್.
ತಿಮ್ಮ :ಹಾ! ಮೊದಲು ಬ್ಯಾಡ್ ನ್ಯೂಸ್ ಹೇಳ್ಬಿಡಿ
ಡಾ:ನಿನಗೆ ರೋಗ ಬಂದಿದ್ದ ಕಾಲಿಗೆ ಬದಲಾಗಿ ಮತ್ತೊಂದು ಕಾಲು ಕತ್ತರಿಸಿಬಿಟ್ಟಿದ್ದೇವೆ,ಸಾರಿ!
ತಿಮ್ಮ:ಅಯ್ಯೋ ಹೋಯ್ತೇ ನನ್ ಕಾಲು, ಹಾಳಾಗೋಯ್ತು ಹೋಗ್ಲಿ ಗುಡ್ ನ್ಯೂಸ್ ಏನ್ ಹೇಳಿ
ಡಾ:ನಿನ್ನ ಇನ್ನೊಂದು ಕಾಲು ಈಗ ವಾಸಿ ಆಗ್ತಾ ಇದೆ.

ಮತ್ತಷ್ಟು ಹಾಸ್ಯಕ್ಕೆ ಭೇಟಿ ಕೊಡಿ – ಸುಗಮ ಕನ್ನಡ ಕೂಟ

ಜಾಣ ಕರ್ನಾಟಕ

೧. ೨೦೧೪ ರ ಕಾಮನ್ ವೆಲ್ತ್ ಕ್ರೀಡೆಗಳಲ್ಲಿ ಡಿಸ್ಕಸ್ ಥ್ರೋ ನಲ್ಲಿ ಚಿನ್ನದ ಪದಕ ಗಳಿಸಿದ ಕ್ರೀಡಾಳು ಯಾರು? ಇವರು ಜನಿಸಿದ್ದು ಯಾವ ಊರಿನಲ್ಲಿ?

೨. ಕೋಲಾರ ಜಿಲ್ಲೆಯ ಬೆಳ್ಳೂರಿನಲ್ಲಿ ಡಿಸಂಬರ್ ೧೪, ೧೯೧೪ ರಲ್ಲಿ ಜನಿಸಿದ ವ್ಯಕ್ತಿಯೊಬ್ಬರು ಇತ್ತೀಚೆಗೆ (೨೦ ಆಗಸ್ಟ್ ೨೦೧೪) ವಿಧಿ ವಶರಾದರು. ಯಾರವರು?, ಇವರು ಯಾವ ವಿಷಯದಲ್ಲಿ ಜಗದ್ವಿಖ್ಯಾತರಾಗಿದ್ದರು?

ಸರಿ ಉತ್ತರಕ್ಕೆ ಪುಟ ೧೪ ನೋಡಿ

ಇದೇನ್ಲಾ ಇದು – ಉತ್ತರ

೧. ಸೂಜಿ

೨. ಬಾಯಿ

ಪದ-ಪುಂಜ (ಶಾನೆ ತಲೆ ಕೆಡಿಸ್ಕೋಬೇಡಿ)

ಕೆಳಕಂಡ ಐದು ವಾಕ್ಯಕ್ಕೆ ಅರ್ಥಬರುವಂತೆ ಬಿಟ್ಟ ಜಾಗ ತುಂಬುವ ಹಾಗೆ ಉತ್ತರ ಹುಡುಕಿ

ಬಂದವರಿಗೆ ಮುಂಬಾಗಿಲಿನಲ್ಲೇ ಮಂಗಳ ಕಾರ್ಯದ ಸೂಚನೆ



ಅವನು ಬಲು ತಾಳ್ಮೆಯ ಗುಣವುಳ್ಳವನು



ಬಿಟ್ಟಿದೇವನು ವಿಷ್ಣುವರ್ಧನನಾಗಿ ಬದಲಾಗಲು ಕಾರಣವಾದ ಧಾರ್ಮಿಕ ಪಂಥ.

ಹಸುವಿಗೆ ಮತ್ತೇರಿಸಿದ ಸುಂದರಾಂಗ



ಬುದ್ಧನಿಗೆ ಜ್ಞಾನೋದಯವಾದ ಊರಿನಲ್ಲಿ ಬಿದ್ದಾಗ ಆದದ್ದು

ಉತ್ತರ: ಸದ್ಯ, ಈ ಪ್ರದೇಶದ ಹವಮಾನದಲ್ಲಿ ಹೆಚ್ಚುಕಡಿಮೆ ಇರುವುದಿಲ್ಲ.



ನಿಮ್ಮ ಉತ್ತರ ಈಮೈಲ್ ಮಾಡಿ, (horanadachilume@gmail.com)

ಸೆಪ್ಟೆಂಬರ್ 25 ತಮ್ಮ ಉತ್ತರ ಕಳುಹಿಸಲು ಕಡೆಯ ದಿನಾಂಕ.

NRI SEVA

Educational, Legal, financial, Health,
Reality management services
Liaison work, Tours & Travels
visit www.nriseva.in or contact
Singapore – Harish +6598691760
Canada – SowmyaKeshava – 00968-99226928
Australia – Nagendra A- 0061401193852

Contact Mr. Nagendra EMAIL
0401193852

ಆಗಸ್ಟ್ ಪದ ಪುಂಜ – ಉತ್ತರ

ಕಳೆದ ತಿಂಗಳ ಪದ ಪುಂಜಕ್ಕೆ ಉತ್ತರಿಸಿದ ಅನೇಕ ಜನರಿಗೆ ನಮ್ಮ ಧನ್ಯವಾದಗಳು. ಅವರ ಪೈಕಿ ಎಲ್ಲಾ ಸರಿ ಉತ್ತರ ಕಳುಹಿಸಿರುವ ಇವರಿಗೆ ನಮ್ಮ ಅಭಿನಂದನೆಗಳು.

- ಸುಮ ಅಶೋಕ್, ಸಿಡ್ನಿ
- ರಾಘವೇಂದ್ರ ಮೂರ್ತಿ, ಬೆಂಗಳೂರು
- ಚಂದ್ರಿಕಾ ಉದಯ್, ಸಿಡ್ನಿ
- ಶ್ರೀಧರ್ ಬಾಣಸಂದ್ರ, ಕ್ಯಾನ್ಬೆರ
- ರಾಜೇಶ್ವರಿ, ಸಿಡ್ನಿ
- ಉಮ ರಾವ್, ಸಿಡ್ನಿ

ಆಗಸ್ಟ್ ತಿಂಗಳ ಪದಪುಂಜದ ಉತ್ತರ

೧. ಸ್ವಭಾವಕ್ಕೊಂದು ರೂಪ ಕೊಟ್ಟರೆ ಗಣಿತದ ಒಂದು ಭಾಗ ಸಿಗುವುದೆ?

ಗು	ಣಾ	ಕಾ	ರ

೨. ನಿದ್ದೆ ಬರುತ್ತಿದೆಯೆಂದು ಬಾಯ್ತೆರೆದರೆ. ಕೊಂಬನ್ನಿಬ್ಬುಕೊಂಡು ಕಾಮಧೇನು ಬಂದಳು.

ಆ	ಕ	ಳು	

೩. ಮೇಲಿನ ಊರಲ್ಲ ಈ ಸಿನ್ತೆನ ನಾಯಕರದು?

ಕ	ಳ	ದಿ	

೪.ಬಿಲ್ಲಿನ ಸಂಗಾತಿ ಅಡುಗೆಯವನೊಡನೆ ಒಂದಾಗಿದೆ.

ಬಾ	ಣ	ಸಿ	ಗ	

೫. ಮಕ್ಕಳೊಡನೆ ಆಟವಾಡಿಕೊ ಎಂದರೆ. ಹೋಗಿ ಹೊಲಗದ್ದೆಗಳ ಕಾವಲಿಗೆ ನಿಂತ.

ಬೆ	ದ	ರು	ಗೊಂ	ಬೆ

ಉತ್ತರ

ಅಂಧಕಾರವನ್ನು ನೀಗಿಸಲು, ದಯಾಳುವನ್ನು ಕರೆದರು ಶ್ರೀಕಂಠಯ್ಯನವರು.

ಕ	ರು	ಣಾ	ಳು	ಬಾ	ಬೆ	ಳ	ಕ

ರಂಗೋಲಿ ಬುಕ್

ನಿಮ್ಮ ರಂಗೋಲಿ ಇಲ್ಲಿ ಕಾಣಬೇಕೇ? ಇ-ಮೇಲ್ ಮಾಡಿ: horanadachilume@gmail.com

ಮತ್ತಷ್ಟು ರಂಗುರಂಗಿನ ರಂಗೋಲಿ ಮುಂದಿನ ಸಂಚಿಕೆಯಲ್ಲಿ

ರಂಗವಲ್ಲಿ

ಭಾರತೀಯ ಸಂಸ್ಕೃತಿಯಲ್ಲಿ, ನಿಯಮ ಪ್ರಕಾರ ಮಾಡುವ ಅನೇಕ ಕಾರ್ಯಗಳಲ್ಲಿ ರಂಗೋಲಿ ಬಿಡಿಸುವುದೂ ಒಂದು. ಸಾಮಾನ್ಯವಾಗಿ ಮನೆಯ ಹೆಣ್ಣು ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಒಂದು ಅಂಗವಾಗಿ ರಂಗೋಲಿ ಹಾಕುವುದನ್ನು ರೂಡಿಸಿಕೊಂಡಿರುತ್ತಾರೆ. ಮನೆಯ ಮುಂದೆ ರಂಗೋಲಿ ಇದ್ದರೆ ಅದೆಷ್ಟು ಲಕ್ಷಣ!

ಕೇವಲ ಸಂಸ್ಕೃತಿ ಅಷ್ಟೇ ಅಲ್ಲದೆ, ರಂಗೋಲಿ ಬಿಡಿಸುವುದರಿಂದ, ರೇಖಾ ಗಣಿತ ಉತ್ತಮಪಡಿಸಿಕೊಳ್ಳುವಲ್ಲಿ ಸಹಕಾರಿ. ಅದೆಷ್ಟು ಚುಕ್ಕಿಗಳು, ಎಂತೆಂತಹ ರೇಖೆಗಳು, ತರಹಾವರಿ ನಮೂನೆಗಳು. ಅಬ್ಬ! ರಂಗೋಲಿ ನಿಮಗೆ ಬೆರಗು ಮಾಡಿಲ್ಲವೇ? ಒಮ್ಮೆ ರಂಗೋಲಿಯಲ್ಲಿ ಕೈ ಆಡಿಸಿ ನೋಡಿ, ಒಂದು ಕಾವ್ಯವೇ ಹುಟ್ಟೀತು ... ▪



15 – 15

ರಚನೆ: ನಾಗಶ್ರೀ ಹರ್ಷ

ತಿಪ್ಪೆಯ ತಪಸ್ಸು

ಸ್ಮಿತಾ ಮೇಲ್ಕೋಟೆ

ಬೆಂಗಳೂರಿನಲ್ಲಿ ತಿಪ್ಪೆ ದರ್ಶನ ಸರ್ವೇ ಸಾಮಾನ್ಯವಾಗಿ ಬೆಳಿಗ್ಗೆ ಹಾಲು ತರೋವಾಗ, ವಾಕಿಂಗ್ ಹೋಗೋ ಸಮಯದಲ್ಲಿ ಧಾರಾಳವಾಗಿ ಆಗುತಿತ್ತು. ಬೀದಿ ಬೀದಿ ಮೂಲೆಗಳಲ್ಲಿ ಒಂದೊಂದು ದೇವಸ್ತಾನ ಇದ್ದ ಹಾಗೆ ತಿಪ್ಪೆ ಗುಂಡಿಗಳ ಸಂಖ್ಯೆ ಕೂಡ. ಆದರೆ ಹೊರದೇಶಕ್ಕೆ ಬಂದ ಮೇಲೆ ತಿಪ್ಪೇನ ನಾನು ಆಗಾಗ ಮಿಸ್ ಮಾಡಿಕೊಳ್ಳುತ್ತಿದ್ದೆ. ಎಲ್ಲಿ ಕಣ್ಣು ಹಾಯಿಸಿದರೂ ಕಸ ಕಡ್ಡಿ ಪ್ಲಾಸ್ಟಿಕ್ ಬೀಳದ ರಸ್ತೆಗಳು, ಹಾಗೊಂದು ಬಾರಿ ಎಲೆಗಳು ಬಿದ್ದರೆ, ಮನೆ ಒಳಗಿನ ಕೆಲಸ ಬಿಟ್ಟು, ಪರಕೆ ಹಿಡಿದು ಓಡೋಡಿ ಬಂದು ಸ್ವಚ್ಛ ಮಾಡೋ ಜನ. ನಮ್ಮೂರಲ್ಲಿ ರಾಜಾ ರೋಷವಾಗಿ ಎಲ್ಲಿ ಬೇಕೋ ಅಲ್ಲಲ್ಲಿ ಸ್ವೇಚ್ಛೆಯಾಗಿ ಹರಡಿಕೊಂಡು, ಸುವಾಸನೆ ಬೀರಿಕೊಂಡು ಜೀವನ ಮಾಡುವ ತಿಪ್ಪೆಯ ವಿಷಯ ಪಾಪ ಈ ಊರಿನ ದೊಡ್ಡ ಕಸದ ತೊಟ್ಟಿಗಳಿಗೆ ಗೊತ್ತಿಲ್ಲದೇ ಹೋಯಿತು. ಗೊತ್ತಾದರೂ ಸರಿ ಏನೂ ಮಾಡೋ ಹಂಗಿಲ್ಲ. ಬಾಯಿ ಮುಚ್ಚಿಕೊಂಡು ಕಸದ ತೊಟ್ಟಿಯೊಳಗೆ ಬಾಗಿಲು ಬಡಿದುಕೊಂಡು ಮಾಡಬೇಕು ಕಳ್ಳ ಜೀವನ!! ವಾರಕ್ಕೊಮ್ಮೆ ಮಾತ್ರ ರಸ್ತೆ ಬದಿಗೆ ವಯ್ಯಾರವಾಗಿ ಬಂದು ನಿಂತು, ಪ್ರಿಯಕರನ ದಾರಿ ನೋಡುವ ಹಾಗೆ, ಕಸ ಒಯ್ಯುವ ದೊಡ್ಡ ಲಾರಿಗೆ ಕಾಯುವ ಕಾತರ !!

ಮನೆಯಲ್ಲಿ ಗುಡ್ಡೆ ಹಾಕಿಕೊಂಡ ಮುರಿದ ಕುರ್ಚಿ, ಬೇಡದ ಮೇಜು, ಹರಿದ ಬುಕ್ಕುಗಳು, ನುಗ್ಗಿದ ಪಾತ್ರೆಗಳು, ಮಾಸಿದ ಹಾಸಿಗೆ, ಹಳೆ ರೇಡಿಯೋ ಮತ್ತು ಕಂಪ್ಯೂಟರ್, ಅದು ಇದು ಮಣ್ಣು ಮಸಿ ಎಲ್ಲಾ ಸಾಮಾನನ್ನು ವರ್ಷಕ್ಕೊಮ್ಮೆ ಅಥವಾ ಎರಡು ಬಾರಿ ಹೊರಗೆ ಹಾಕಬಹುದು. ಕಸದ ತೊಟ್ಟಿ ಒಳಗೆ ಹಿಡಿಸದ oversize ಕಸ ಇದು. ಅದಕ್ಕೂ ಕೂಡ ಒಂದೇ ದಿನ ಹೊರಗಿನ ಪ್ರಪಂಚ ನೋಡೋ ಅವಕಾಶ. corporation ಲಾರಿ ಬಂದಿದ್ದೆ ತಡ, ಪಾಪ ಈ ಬೇಡದ ಬಡಪಾಯಿ ಸಾಮಾನುಗಳು ಅವಿತು ಕೂತು ಹೆದರಿ ತತ್ತರಿಸುತ್ತವೆ. ಏಕೆ ಗೊತ್ತೇ ? ಬಂದ ಲಾರಿ ಮುಖ ಮೂತಿ ನೋಡದೆ, ಎಲ್ಲವನ್ನೂ ಎತ್ತಿ ಲಾರಿ ಒಳಗೆ ಹಾಕಿದ್ದೆ ತಡ, ಒಳಗೆ ದೊಡ್ಡ ಮಿಕ್ಸರ್ ರಾಕ್ಷಸ ಅದನ್ನು ನುಚ್ಚು ನೂರು ಮಾಡುತ್ತೆ. ಬೇಡದ ಸಾಮಾನುಗಳು ಪುಡಿ ಪುಡಿಯಾಗಿ, ಮುಕ್ತಿ ಹೊಂದಿ ನಿರ್ವಾಣ ಸ್ಥಿತಿ ತಲುಪಿ ಬಿಡುತ್ತೆ.

ಸಾಮಾನ್ಯವಾಗಿ ಬೆಳಿಗ್ಗೆ ಏಳು ಗಂಟೆ ಮುಂಚೆಯೇ ಈ ಭಾರಿ ಕಸದ ಲಾರಿಗಳು ಎಲ್ಲಾ ರಸ್ತೆಗಳಿಗೆ ಭೇಟಿ ಕೊಟ್ಟು, ಮನೆ ಮುಂದೆ ಕಸ ಇತ್ತಾ ಎನಿಸುವಷ್ಟು ಸ್ವಚ್ಛ ಮಾಡಿ ಹೋಗಿಬಿಡುತ್ತವೆ. ಲಾರಿ ಚಾಲಕ ಒಬ್ಬನೇ ಒಳಗೆ, ಲಾರಿಯ ದಷ್ಟ ಪುಷ್ಟವಾದ ಯಂತ್ರದ ಕೈಗಳು ಹೊರಗೆ ಬಂದು ಕಸ ತನ್ನೊಳಗೆ ಎಸೆದುಕೊಂಡು ಮುಂದೆ ಮುಂದೆ ಚಲಿಸುತ್ತವೆ. ಈಗೇನು technology ಬಳಕೆ ಕಡಿಮೆಯೇ ??

ಹೀಗಿರುವಾಗ ನಮ್ಮ ಇಲ್ಲಿಯ ಕಸದ ತೊಟ್ಟಿಯ ಜೀವನಕ್ಕೆ ಬಿರುಗಾಳಿ ಬೀಸಿ ಬಿಟ್ಟಿತು. ನಮ್ಮ ಮನೆ ರಸ್ತೆಯಲ್ಲಿ ನಾವು ಮತ್ತು ಮತ್ತೆ ಮೂರು ನಾಲ್ಕು ಮನೆಯವರು ದೊಡ್ಡ ದೊಡ್ಡ ಕಸವನ್ನು ಅಂದರೆ ಬೇಡದ ಸಾಮಾನನ್ನು ಹೊರಗೆ ಹಾಕಿದ್ದೆವು. ಲಾರಿ ಮಾರನೆ ದಿನ ಬಂದು ಒಯ್ಯಬೇಕೆಂದರೆ, ಹಿಂದಿನ ರಾತ್ರಿ ಮಾತ್ರವೇ ಎಸೆಯಬೇಕು. ಬೇಕಾ ಬಿಟ್ಟಿ ಎಲ್ಲೆಂದರಲ್ಲಿ ಹರಡೋ ಹಾಗಿಲ್ಲ. ಬೀದಿಗೆ ಬೀಳದ ಹಾಗೆ, ಪುಟ್ಟಾತ್ಗೆ ತಾಕದ ಹಾಗೆ ಎಲ್ಲಾ ಸಾಮಾನುಗಳು ನಗು ಮುಖದಿಂದ ಬಂದು ಕೂತಿದ್ದವು. ಒಂದೊಕ್ಕೊಂದು ಪಾಪ ಕಡೆಯ ಟಾಟ ಬೈ ಬೈ ಹೇಳಿಕೊಂಡು, ಮುಂದಿನ ಜನ್ಮದಲ್ಲಾದರೂ ಭಾರತ ಸೇರಬೇಕು ಅಲ್ಲಿಯ ತೊಟ್ಟಿಯ ಜೀವನ ಬಹು ಮಜವಾಗಿರುತ್ತೆ ಎಂದು ಕೊನೆಯ ಬಾರಿ ದೇವರನ್ನು ಬೇಡಿಕೊಂಡು ಮಲಗಿದವು. ಸ್ವಂತಂತ್ರ ಕಸದ ಜೀವನ ಒಂದು ಬಾರಿಯಾದರೂ ಅನುಭವಿಸಬೇಕು ಎಂದು ಕನಸು ಕಾಣ ತೊಡಗಿದವು.

ಮಾರನೆ ದಿನ ಲಾರಿ ಸೌಂಡಿನ ಸುಪ್ರಭಾತ ಯಾಕೋ ಕೇಳಲಿಲ್ಲ.. ಏನೋ ಮಳೆ ಮೋಡ ಎಂದು ಸ್ವಲ್ಪ ಲೇಟ್ ಆಗಿರಬೇಕು ಅಂತ ನಾನು ಸುಮ್ಮನಾದೆ. ಅವಾಂತರದ ಬದುಕು ನಮ್ಮನ್ನು ಬಿಡುತ್ತದಯೇ ? ಹೊರಗೆ ಬಿದ್ದ ಬೇಡದ ಸಾಮಾನುಗಳಿಗೆ ಟಾಟ ಹೇಳಿ ನಾನು ಬೇಗ ಬೇಗ ಆಫೀಸಿಗೆ ಹೊರಟೆ. ಕಂಪ್ಯೂಟರ್ನಲ್ಲಿ ಕನ್ನಡ ದಿನಪತ್ರಿಕೆ ಮೇಲೆ ಮೌಸ್ ಆಡಿಸಿ ತಾಯ್ನಾಡಿನಲ್ಲಿ ಏನೇನು ಸಮಾಚಾರ ಎಂದು ಓದಿ ನಂತರ ಲೋಕಲ್ ಪತ್ರಿಕೆ ಓಪನ್ ಮಾಡ್ತೀನಿ.. ದೊಡ್ಡ ಅಕ್ಷರಗಳಲ್ಲಿ ಹಾಕಿದ್ದಾರೆ " GARBAGE BIN TRUCK MET WITH AN ACCIDENT!! ALL THE TRUCKS ARE GROUNDED "

ತಕ್ಷಣವೇ ನನಗೆ ಮನೆ ಹೊರಗೆ ಬಿದ್ದ ದೊಡ್ಡ ದೊಡ್ಡ ಸಾಮಾನುಗಳ ತಿಪ್ಪೆ ವಿಷಯ ಕೊರೆಯಲು ಶುರುವಾಯಿತು. ಛೆ ಏನಿದು ಹೀಗಾಯಿತು. ಇನ್ನು ಎಷ್ಟು ದಿನ ಕಸ ಹೊರಗೆ ಬಿದ್ದಿರುತ್ತೋ ಅಂತ ಯೋಚನೆ ಶುರುವಾಯಿತು. ಇಲ್ಲಿ ಮನೆ ಮುಂದೆ ಬಿದ್ದ ಕಸಗಳಿಗೆ ಸಂತೋಷವೋ ಸಂತೋಷ. ಸ್ವಂತಂತ್ರವಾದ ಬದುಕು bin ಹೊರಗೆ ಅಂತ ನಿರ್ಮಲವಾದ ಗಾಳಿ ಉಸಿರಾಡತೊಡಗಿದವು. ಸಾಯಂಕಾಲ ಆಫೀಸಿಂದ ಬಂದ ನನ್ನನ್ನು ತಿಪ್ಪೆ ನಗುಮುಖದಿಂದ ಬರಮಾಡಿಕೊಂಡವು !

(ಮುಂದಿನ ಪುಟ ನೋಡಿ)

ಚಾಣ ಕರ್ನಾಟಕ – ಉತ್ತರ

೧. ವಿಕಾಸ ಗೌಡ, ಮೈಸೂರು.

೨. ಬೆಳ್ಳೂರು ಕೃಷ್ಣಮಾಚಾರ್ ಸುಂದರರಾಜ್ ಐಯ್ಯಂಗಾರ್. ಐಯ್ಯಂಗಾರ್ ಯೋಗ.

ಮನೆ ಹೊರಗೆ ಇದ್ದ ತಿಪ್ಪೆ ಗತಿ ಏನಪ್ಪಾ ? ತಿರುಪತಿ ತಿಮ್ಮಪ್ಪ ನೀನೆ ನಮ್ಮ ಮನೆ ಮುಂದೆ ಬಿದ್ದು ಹೊರಳಾಡುತ್ತಿರುವ ತಿಪ್ಪೆ ಕ್ಲಿಯರ್ ಮಾಡಿಸು ಅಂತ ಬೇಡಿಕೊಂಡು ನೋಡ್ತೀನಿ. ಫರ್ನಿಚರ್ ಬೆಡ್ ಪಾತ್ರೆ ಪಗಡೆ ಎಲ್ಲಾ ಚೆಲ್ಲಾಪಿಲ್ಲಿ ಆಗಿದೆ. ಕೆಲವು ವಾಕಿಂಗ್ ಹೋಗೋ ಜನ ಕುರ್ಚಿ ಮೇಜು ಚೆನ್ನಾಗಿದ್ದರೆ ತಗೊಂಡು ಹೋಗಿರುತ್ತಾರೆ. ಹೋಗುವ ಮುನ್ನ ಅಲ್ಲಿದ್ದ ಎಲ್ಲಾ ಸಾಮಾನುಗಳ ಮೇಲೂ ಒಂದು ಸಲ ಕೈ ಆಡಿಸಿ ಅಲ್ಲೋಲ ಕಲ್ಲೋಲ ಮಾಡಿದ್ದಾರೆ.

ಚೆಲ್ಲಾಡಿಕೊಂಡ ತಿಪ್ಪೆಗಂತೂ ಖುಷಿಯೋ ಖುಷಿ. ತಿಪ್ಪೆ ಹೊತ್ತ ಹರಕೆ/ಕನಸು ಎಲ್ಲಾ ಒಂದೇ ರಾತ್ರಿಯಲ್ಲಿ ಸಾಕಾರ ಆಗಿರಬೇಕಾರೆ ಅದಕ್ಕಿರುವ ದೈವ ಭಕ್ತಿ ಎಷ್ಟಿರಬೇಕು !!

ಈಗ ದಿನ ಬೆಳಗಾದರೆ ಮೊದಲು ಲೋಕಲ್ ಪೇಪರ್ ನೋಡೋದು. ನಮ್ಮ ಮನೆ ಮುಂದಿನ ತಿಪ್ಪೆ ಜೀವನಕ್ಕೆ ಯಾವತ್ತು ನಾಂದಿ ಹಾಡುತ್ತಾರೋ ಈ ಕಾರ್ಪೋರೇಶನ್ ಜನ ಅಂತ. ಪೇಪರ್ ನಲ್ಲಿ ದೊಡ್ಡ ದೊಡ್ಡ ಆರ್ಟಿಕಲ್ ಬಿನ್ ಟ್ರಕ್ ಗಳು ಎಲ್ಲವೂ safety check ಗೆ ಕಾದಿವೆ. ರಸ್ತೆಯಲ್ಲಿ ಜನಗಳ ಸುರಕ್ಷೆ ಮುಖ್ಯ. ಎಲ್ಲಾ ಲಾರಿಗಳೂ ಸುರಕ್ಷಾ ಪರೀಕ್ಷೆಗೆ ಒಳಪಟ್ಟಿವೆ, ನಂತರವೇ ಅದನ್ನು ಮತ್ತೆ ಕೆಲಸಕ್ಕೆ ಕಳಿಸುತ್ತೇವೆ ಎಂದು ಪ್ರಮುಖರೆಲ್ಲಾ ಹೇಳಿಕೆ ಬೇರೆ ಕೊಡೋದು !

ಹೀಗೆ ಒಂದು ವಾರ ಮನೆಯಿಂದ ಆಚೆ ಬಂದ ತಕ್ಷಣ ತಿಪ್ಪೆ ದರ್ಶನ. ಅದೇನೋ ಗಾದೆ ಇದೆಯಲ್ಲ " ಮನೆ ಮುಂದೆ ಬೃಂದಾವನ " ಅಂತ... ಅದನ್ನು " ಮನೆ ಮುಂದೆ ತಿಪ್ಪೆ" ಅಂತ ಬದಲಾಯಿಸಬೇಕು ಅನ್ನಿಸ್ತಾ ಇತ್ತು. ತಿಪ್ಪೆಗೆ ಚೆಲ್ಲಾಟ ನನಗೆ ಪ್ರಾಣ ಸಂಕಟ !! ನಾನು ನನ್ನ ದೈವ ಭಕ್ತಿಯ ಪರೀಕ್ಷೆಗೆ ತೊಡಗಿದೆ ದಿನಾಲು ತುಪ್ಪದ ದೀಪ ಹಚ್ಚೋದು, ತಿಪ್ಪೆಗೆ ಮುಕ್ತಿ ಕೊಡಪ್ಪ ಎಂದು ಬೇಡೋದು.

ನನ್ನ ಮೊರೆ ದೇವರಿಗೆ ಕೇಳಿತು ಅನ್ನಿಸುತ್ತೆ. ಒಂದು ದಿನ ಆಫೀಸ್ ಇಂದ ಮನೆಗೆ ಬರುವ ಹೊತ್ತಿಗೆ ಮನೆ ಮುಂದೆ ಬಿದ್ದ ಎಲ್ಲಾ ತಿಪ್ಪೆ ಮಂಗ ಮಾಯ!! ಅಯ್ಯೋ ತಿಪ್ಪೆಗೆ ನಾನು ಕಡೆಯ ವಿದಾಯ ಕೂಡ ಹೇಳಲಿಲ್ಲ ಅಂತ ಸ್ವಲ್ಪ ಬೇಜಾರು ಕೂಡ ಪಟ್ಟೆ ! ಆದರೆ ಒಂದು ಸಮಾಧಾನ ನಮ್ಮೂರಿನ ಫಾರಿನ್ ತಿಪ್ಪೆಗೆ ಭಾರತದ ತಿಪ್ಪೆ ಜೀವನ ಅರಿವಾಯ್ತಲ್ಲ ಎಂದು !! ▪

ಹುಬ್ಬಳ್ಳಿ ಜಂಕ್ಷನ್ ...

(ನಮ್ದು ಖಡಕ್ ಭಾಷೆರೀಯಪ್ಪ)

ಬಸವರಾಜ್ ಕೆಂಪಲಿಂಗಣ್ಣವರ್

ಉತ್ತರ ಕರ್ನಾಟಕ ಸ್ಟೈಲ್ ಲವ್ ಲೆಟರ್...

ಪ್ರೀತಿಯ ಇಕಿನ,

ಏ ಇಕಿನ ಸ್ವಲ್ಪ ನೋಡ್ ಇದನ, ನಾ ಹೈಸ್ಕೋಲ್ ಗೆ ಯಾವತ್ತ ಕಾಲಿಟ್ಯೋ ಅವತ್ತಿಂದ ನಿನ್ನ ನೋಡಿದಾಗೊಮ್ಮೆ ಹ್ಯಾಂಗಂಗರ್ ಆಕೆತಿ, ನಿನ್ನ ದನಿ ಕೇಳಿದ್ರ ಹಂಗ ಕೇಳ್ಕೊಂತ ಕುಂದ್ರಬೇಕ ಅನಸ್ತೈತಿ.

ಇನ್ನ, ನೀ ನನ್ನ ಜೊತೆ ಮಾತಾಡುವಾಗಂತೂ ಎದಿ ಹಂಗ ಡಬ ಡಬ ಹೊಡ್ಕೊತಿರತೈತಿನೀ ನನ್ನ ಕಣ್ಣಾಗ್ ಕಣ್ಣಿಟ್ಟು ನೋಡ್ತಿಯಲ್ಲ ., ಅವಾಗ್ ನಾನು ಕಕ್ಕ ಬಿಕ್ಕಿ ಅಕ್ಕೆನಿ ಗೊತ್ತೈತೇನ?

ಏನರ್ ಆಗ್ಲಿ ನನಗಂತೂ ನಿನ್ನ ಮ್ಯಾಲ ಕುಚು ಕುಚು ಶುರು ಆಗೇತಿ, ನಿನಗೂ ನನ್ನ ಮ್ಯಾಲ ಕುಚು ಕುಚು ಇತ್ತಂದ್ರ ಹೊತ್ತ ಮುಳಗು ಮುಂದ ನಮ್ಮ ಸಾಲಿ ಗ್ರೌಂಡ್ ಕಡೆ ನಾ ಕಾಯ್ತಿರ್ತಿನಿ ಅಲ್ಲಿಗೆ ಬಂದ ಹೇಳ ಮತ್ತ.

ನಿನಗ ನನ್ನ ಮ್ಯಾಲ ಕುಚು ಕುಚು ಇಲ್ಲಂದ್ರು ಬಂದ ಕಾಗದ ಹೊಳ್ಳಿ ಕೊಟ್ಟ ಹೋಗ, ಸುಮ್ನೆ ಕಾಗದ ವೈಸ್ಟ್ ಮಾಡುದ ಬ್ಯಾಡ, ಮತ್ತ ಯಾರಿಗರ ಕೊಡಾಕ್ ಬರತೈತಿ.

ಇನ್ನೊಂದ ನೆನಪ ಇಟ್ಕೋ, ಮಾಸ್ತರ್ ಮುಂದ ಇಲ್ಲಾ ನಿಮಪ್ಪನ ಮುಂದ ಹೇಳಿದಿ ಗಿಳಿದೆಂದ್ರ, ನಿಮ್ಮೌನ ಮಗಳ ಭಂದರ ಬರ್ತೀಯನ ನಾಳಿಂದ ನೀ ಸಾಲಿಗೆ..?

ಇಂತಿ ನಿನ್ನ
ಏನರ ತಿಳ್ಕೋ

ವಿಜ್ಞಾನ

ಸೂರ್ಯಾಸ್ತ ಮತ್ತು ಸೂರ್ಯೋದಯ ಕೆಂಪೇಕೆ !

ಸಂಕಲನ: ಬದರಿ ತ್ಯಾಮಗೊಂಡ್ಲು

ಮನೆಯಲ್ಲಿ ಈ ಸರಳ ಪ್ರಯೋಗ ಮಾಡಿ, ಸೂರ್ಯಾಸ್ತ ಮತ್ತು ಸೂರ್ಯೋದಯದ ವೇಳೆ ಕೆಂಪು/ಕಿತ್ತಳೆ ಬಣ್ಣವೇಕಿರುತ್ತದೆ ಎಂದು ತಿಳಿಯೋಣ.





ಬೇಕಾಗುವ ಸಾಮಗ್ರಿ:

ಒಂದು ಗಾಜಿನ ಲೋಟ

ಅರ್ಧ ಲೋಟ ನೀರು ಮತ್ತು ಅರ್ಧ ಲೋಟ ಹಾಲು

ಒಂದು ಟಾರ್ಚ್

ವಿಧಾನ:

ಇದನ್ನು ಕತ್ತಲೆಯ ಕೋಣೆಯಲ್ಲಿ/ಮಂದಬೆಳಕಿನ ಕೋಣೆಯಲ್ಲಿ ಮಾಡಿದರೆ ಉತ್ತಮ.

ಲೋಟದ ಅರ್ಧಕ್ಕೆ ನೀರು ತುಂಬಿ ಟಾರ್ಚ್ ಬೆಳಕನ್ನು ಲೋಟದ ಮೇಲೆ ಬೀರಿರಿ. ಬಿಳಿ ಬೆಳಕು ಶುಭ್ರ ನೀರಲ್ಲಿ ಹಾದು ಬಿಳಿಯಾಗಿ ಕಾಣುತ್ತದೆ. ಈಗ ಲೋಟ ತುಂಬುವಷ್ಟು ಹಾಲನ್ನು ಹಾಕಿರಿ. ಟಾರ್ಚ್ ಬೆಳಕನ್ನು ಲೋಟದ ಹಿಂಬದಿಯಿಂದ ಹರಿಯಬಿಡಿ. ಹಾಲಿನ ಸಾಂದ್ರತೆಗನುಗುಣವಾಗಿ, ಸೂರ್ಯೋದಯ/ಸೂರ್ಯಾಸ್ತದಲ್ಲಿ ಕಾಣುವಂತೆ ಹಳದಿ/ಕಿತ್ತಲೆ/ಮಂದ ಕೆಂಪು ಬಣ್ಣ ಕಾಣುತ್ತದೆ

ಏನಾಗುತ್ತಿದೆ:

ಪರಿಸರದಲ್ಲಿ ಲಕ್ಷಾನುಲಕ್ಷ ಧೂಳಿನ ಕಣಗಳು ಹರಡಿಕೊಂಡಿರುತ್ತದೆ. ಸೂರ್ಯನ ಬೆಳಕು ಬೆಳಿಗ್ಗೆ ಮತ್ತು ಸಾಯಂಕಾಲದಲ್ಲಿ ಭೂಮಿಯನ್ನು ಪ್ರವೇಶಿಸಬೇಕಾದರೆ ಹೆಚ್ಚು ಹೆಚ್ಚು ಕಣಗಳನ್ನು ಹಾದು ಹೋಗಬೇಕು. ಹೀಗಾದಾಗ ಬೆಳಕು ಹೆಚ್ಚು ಹೆಚ್ಚು ಪುಟಿದು ಚದುರುತ್ತದೆ. ಕಿತ್ತಳೆ ಮತ್ತು ಕೆಂಪು ಬಣ್ಣವು ಚದುರುವುದು ಕಡಿಮೆ. ಹೀಗಾಗಿ ಆ ಬಣ್ಣಗಳು ನಮಗೆ ಗೋಚರಿಸುತ್ತವೆ. ▪

ಅಲ್ಲಲ್ಲಿ ಏನೇನು

ನಿಮ್ಮ ಕಾರ್ಯಕ್ರಮವಿದ್ದರೆ ತಿಳಿಸಿ - horanadachilume@gmail.com

ಸುಗಮ ಗಾನ ಸಮಾಜ ಸಾದರಪಡಿಸುತ್ತಿದೆ **ಕನ್ನಡ ಕ್ಯಾರಯೋಕೆ ಸಂಜೆ**

ಗಾನ ಸಮಾಜದ ಎಲ್ಲಾ ಸದಸ್ಯರಿಗೂ ಹಾಡಲು ಮುಕ್ತ ಅವಕಾಶ

ಅಂದು ವೇದಿಕೆಯಲ್ಲಿ ಹಲವಾರು ಹೊಸ ಪ್ರತಿಭೆಗಳ ಪರಿಚಯ ಮಾಡಲಾಗುವುದು.

(More information will be announced later)

ಸ್ಥಳ: WattleGrove Public School, Cressbrook Drive, NSW 2173

ಸಮಯ: **05:30pm,** ದಿನ **: 27th Sep 2014**

Contact: sugamakannada@yahoo.com.au

ಫ್ರೆಂಡ್ಸ್ ಆಫ್ ಇಂಡಿಯಾ ಗಣೇಶೋತ್ಸವ (Ganeshotsava – Friends of India)

Venue: Whitlam Leisure Centre, Woodward Park, Memorial Avenue, Liverpool, NSW 2170

Date: Sep 13th and 14th 2014

Sat 13th 2014 – Morning 8AM-11AM - Ganesha Pooje
Evening 5PM-8PM – Cultural Programs
Sun 14th 2014 – Morning 8AM-11AM – Satyanarayana Pooje
1:30 PM – Dandiya followed by Visarjane

For details email: ganeshotsava2014@gmail.com

Diya-licious Diwali

(ಸಹಾಯ ನಿಧಿ ಸಂಗ್ರಹಕ್ಕಾಗಿ)

Dinner & entertainment evening
ದಿನ: 18-10-2014
ಸಮಯ: 06:45 pm
ಸ್ಥಳ:CherryBrook Community Ctr
Shepers Drive, Cherrybrook NSW 2126

ಹೆಚ್ಚಿನ ವಿವರಗಳಿಗೆ http://vision2020.org.au/

ನಮ್ಮ
ಸುತ್ತಾ
ಮುತ್ತಾ

Deepavali at Martin Place

September 26, 2014

Address: Martin Place, Sydney, Australia 2000
@ 11am to 7pm

Contact number : 0413647713
Email : info@hinducouncil.com.au

ಈ ಸಂಚಿಕೆ ನಿಮಗಾಗಿ ತಂದವರು – ಸುಗಮ ಕನ್ನಡ ಕೂಟ – ಸಿಡ್ನಿ, ಆಸ್ಟ್ರೇಲಿಯಾ

ವಿನ್ಯಾಸ ಮತ್ತು ಮುಖ್ಯ ಸಂಪಾದಕರು – ಬದರಿ ತ್ಯಾಮಗೊಂಡ್ಲು ~ ಸಂಕಲನ – ವೀಣಾ ಸುದರ್ಶನ್, ರಾಜಲಕ್ಷ್ಮಿ ನಾರಾಯಣ

ಸಲಹಾ ಸಮಿತಿ –ಕನಕಾಪುರ ನಾರಾಯಣ, ನಾಗೇಂದ್ರ ಅನಂತಮೂರ್ತಿ

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲ ವಿಷಯಗಳು ವಿವಿಧ ಲೇಖಕರ ಅನಿಸಿಕೆಗಳು. ಯಾವುದೇ ಅನಾನುಕೂಲವಾದಲ್ಲಿ "ಸುಗಮ ಕನ್ನಡ ಕೂಟ" ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಜವಾಬ್ದಾರರಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಸುದ್ದಿ ಮಾಹಿತಿ, ಚಿತ್ರಗಳ ಹಕ್ಕುಗಳು ಸ್ಪಷ್ಟವಾಗಿ ಉಲ್ಲೇಖಿಸಿರದಿದ್ದರೆ ಅದು ಸುಗಮ ಕನ್ನಡ ಕೂಟಕ್ಕೆ ಸೇರಿದೆ.
ಸಂಚಿಕೆಯಲ್ಲಿ ಬಳಸಿದ ಹಲವು ಚಿತ್ರಗಳು ಅಂತರ್ಜಾಲದಿಂದ ಪಡೆದದ್ದು. ಅದರ ಎಲ್ಲ ಹಕ್ಕೂ ಅದರದರ ಕರ್ತೃಗಳಿಗೆ ಸೇರಿದ್ದು.